# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 273 (209+211) |
| ಸದಸ್ಯರ ಹೆಸರು | : | ಶ್ರೀ.ಸುನೀಲ್‌ಗೌಡ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 13.09.2022 |
| ಉತ್ತರಿಸುವ ಸಚಿವರು | : | ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ವಿಜಯಪುರ ಜಿಲ್ಲೆ ಮುದ್ದೇಬಿಹಾಳ ಪುರಸಭೆಯ ಪ್ರಸ್ತುತ ಮುಖ್ಯಾಧಿಕಾರಿಗಳು ಅಕ್ರಮ ಎಸಗಿದ್ದು, ಸರ್ಕಾರದ ಗಮನಕ್ಕೆ ಬಂದಿದಿಯೇ? ಬಂದಿದ್ದಲ್ಲಿ, ಅಕ್ರಮಗಳ ವಿವರ ನೀಡುವುದು. ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು). | ಮುದ್ದೇಬಿಹಾಳ ಪುರಸಭೆ ಮುಖ್ಯಾಧಿಕಾರಿ ಶ್ರೀಮತಿ.ಎಸ್.ಎಸ್.ಬಾಗಲಕೋಟ ಇವರ ಕರ್ತವ್ಯಲೋಪ ಕುರಿತು ತನಿಖಾ ವರದಿಯನ್ನು, ಜಿಲ್ಲಾಧಿಕಾರಿಗಳು, ವಿಜಯಪುರ ಜಿಲ್ಲೆ ಇವರು ಸ:ಜಿನಕೋ/01/ಸಿಬ್ಬಂದಿ/22-23, ದಿ:22.08.2022ರಲ್ಲಿ ಸಲ್ಲಿಸಿರುತ್ತಾರೆ.<br><br>ಸದರಿ ವರದಿಯಲ್ಲಿ ಮುಖ್ಯಾಧಿಕಾರಿಗಳ ವಿರುದ್ಧದ ಕರ್ತವ್ಯಲೋಪಗಳು ಮೇಲ್ನೋಟಕ್ಕೆ ಕಂಡು ಬಂದಿದ್ದು, ಜಿಲ್ಲಾಧಿಕಾರಿಗಳ ಶಿಫಾರಸ್ಸಿನಂತೆ ಮುದ್ದೇಬಿಹಾಳ ಪುರಸಭೆ ಮುಖ್ಯಾಧಿಕಾರಿ ಶ್ರೀಮತಿ.ಎಸ್.ಎಸ್.ಬಾಗಲಕೋಟ ಇವರ ವಿರುದ್ಧ ಇಲಾಖಾ ವಿಚಾರಣೆ ಕಾಯ್ದಿರಿಸಿ ಸದರಿಯವರನ್ನು ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಇವರು ದಿನಾಂಕ:07.09.2022 ರಂದು ಅಮಾನತ್ತುಗೊಳಿಸಿ ಆದೇಶಿಸಲಾಗಿದೆ. |
| ಆ) | ಸದರಿ ಪುರಸಭೆಯ ಪ್ರಸ್ತುತ ಮುಖ್ಯಾಧಿಕಾರಿಯು ಕಾನೂನುಗಳನ್ನು ಧಿಕ್ಕರಿಸಿ ಆಡಳಿತ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದಿಯೇ? ಬಂದಿದ್ದಲ್ಲಿ, ಅಂತಹವರ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು? ಈ ಕುರಿತು ಸರ್ಕಾರದ ಸ್ಪಷ್ಟ ನಿಲುವೇನು? | |
| ಇ) | ಪುರಸಭೆಯ ಆಡಳಿತ ಮಂಡಳಿಯ ಸಲಹೆಗಳನ್ನು ಸಂಪೂರ್ಣವಾಗಿ ಗಾಳಿಗೆ ತೂರಿದ್ದು, ಮಾನ್ಯ ಪುರಸಭೆಯ ಸದಸ್ಯರುಗಳ ಹಕುಚ್ಯುತಿ ಆದಂತಾಗುವುದಿಲ್ಲವೇ? (ವಿವರ ನೀಡುವುದು). | ಪಟ್ಟಣದಲ್ಲಿ ಯಾವುದೇ ರೀತಿಯ ಅಭಿವೃದ್ಧಿ ಕಾಮಗಾರಿ ನಡೆದರೂ ಆಡಳಿತ ಮಂಡಳಿಯ ಗಮನಕ್ಕೆ ತಂದಿರುವುದಿಲ್ಲ ಎಂಬ ವಿಷಯಕ್ಕೆ ಸಂಬಂಧಿಸಿದಂತೆ ತನಿಖಾ ತಂಡದಿಂದ ವರದಿ ಪಡೆದುಕೊಂಡಿದ್ದು, ವರದಿಯಲ್ಲಿ ಪಟ್ಟಣದ ಅಭಿವೃದ್ಧಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಪುರಸಭೆ ಆಡಳಿತ ಮಂಡಳಿಯ ಸಾಮಾನ್ಯ ಸಭೆಯಲ್ಲಿ ಕ್ರಿಯಾ ಯೋಜನೆಗಳಿಗೆ ಅನುಮೋದನೆ ಪಡೆಯಲಾಗಿರುತ್ತದೆ ಎಂದು ವರದಿಯಲ್ಲಿ ತಿಳಿಸಿರುವುದರಿಂದ ಸದಸ್ಯರುಗಳ ಹಕುಚ್ಯುತಿ ಪ್ರಶ್ನೆ ಉದ್ಭವಿಸುವುದಿಲ್ಲ. |

| | | |
|---|---|---|
| ಈ) | ಪುರಸಭೆಯಲ್ಲಿ ನಡೆದಿರುವ ಅಕ್ರಮಗಳ ಕುರಿತು ಯಾವುದಾದರೂ ತನಿಖೆಯನ್ನು ನಡೆಸಲಾಗಿದೆಯೇ? (ನಡೆಸಲಾಗಿದ್ದರೆ ಸದರಿ ತನಿಖೆಯ ವರದಿ ನೀಡುವುದು) | ಜಿಲ್ಲಾಧಿಕಾರಿಗಳು, ವಿಜಯಪುರ ಜಿಲ್ಲೆ ಇವರಿಂದ ದಿ:22.08.2022 ರ ಪತ್ರದೊಂದಿಗೆ ಸ್ವೀಕೃತವಾಗಿರುವ ತನಿಖಾ ವರದಿಯ ಪ್ರತಿ ಲಗತ್ತಿಸಿದೆ. |

**ಸಂಖ್ಯೆ:ನಅಇ 05 ಎಲ್‌ಸಿಕ್ಯೂ 2022**

(ಎನ್.ನಾಗರಾಜು ಎಂ.ಟಿ.ಬಿ)
ಪೌರಾಡಳಿತ, ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ
ವಲಯ ಉದ್ಯಮಗಳ ಸಚಿವರು.

ಜಿಲ್ಲಾ ನಗರಾಭಿವೃದ್ಧಿ ಕೋಶ,
ವಿಜಯಪುರ.

ಜಿಲ್ಲಾಧಿಕಾರಿಗಳ ಕಚೇರಿ
ಆವರಣ, ವಿಜಯಪುರ.

Phone:08352-259855, E-mail: itstaff_dudc_bijapur@yahoo.co.in & dudc_bjp@yahoo.co.in

ಕ್ರ:ಜಿನಕೋ-1/ಸಿಬ್ಬಂದಿ/2022-23 ದಿನಾಂಕ: 22-08-2022

ರವರಿಗೆ,
ಮಾನ್ಯ ನಿರ್ದೇಶಕರು,
ಪೌರಾಡಳಿತ ನಿರ್ದೇಶನಾಲಯ,
ಬೆಂಗಳೂರು.

ಮಾನ್ಯರೆ,

ವಿಷಯ: ಶ್ರೀಮತಿ ಎಸ್.ಎಸ್.ಬಾಗಲಕೋಟ ಮುಖ್ಯಾಧಿಕಾರಿ ಪುರಸಭೆ ಮುದ್ದೇಬಿಹಾಳ ರವರು ಎಸಗಿರುವ ಕರ್ತವ್ಯಲೋಪದ ಕುರಿತು.

4654817

Directorate of Municipal Administration
Compilation
5 SEP 2022
ADA / AD. Admin
DMA

ಉಲ್ಲೇಖ: 1) 1) ಮಹಿಬೂಬ ಎಲ್ ಗೊಳಸಂಗಿ 2) ಶಿವು ಶಿವಪುರ ಸದಸ್ಯರು ಪುರಸಭೆ ಮುದ್ದೇಬಿಹಾಳ ಇವರ ಮನವಿ ಪತ್ರ ದಿನಾಂಕ:19-07-2022.
2) ಈ ಕಾರ್ಯಾಲಯದ ಆದೇಶ ಸಂಖ್ಯೆ:ಜಿನಕೋ-1/ಸಿಬ್ಬಂದಿ/ಕಚೇರಿ ತಪಾಸಣೆ/2022-23 ದಿನಾಂಕ:29-07-2022.
3) ತನಿಖಾಧಿಕಾರಿಗಳ ವರದಿ ದಿನಾಂಕ:17-08-2022.

=0*0=

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಸದಸ್ಯರು ಪುರಸಭೆ ಮುದ್ದೇಬಿಹಾಳ ಇವರು ಉಲ್ಲೇಖಿತ (1)ರಲ್ಲಿ ಮುಖ್ಯಾಧಿಕಾರಿಗಳು ಪುರಸಭೆ ಮುದ್ದೇಬಿಹಾಳ ಇವರ ಆಡಳಿತ ಧೋರಣೆ ಖಂಡಿಸಿ 12 ಅಂಶಗಳ ಬೇಡಿಕೆಯನ್ನಿಟ್ಟು ಸತ್ಯಾಗ್ರಹ ನಡೆಸುತ್ತಿದ್ದಾರೆ. ಪ್ರಯುಕ್ತ ಉಲ್ಲೇಖ (2)ರಲ್ಲಿ 12 ಅಂಶಗಳ ಬೇಡಿಕೆಯ ಕುರಿತು ತನಿಖೆ ಮಾಡಿ ವರದಿ ಸಲ್ಲಿಸಲು ತನಿಖಾ ತಂಡವನ್ನು ರಚಿಸಲಾಗಿದ್ದು, ಅದರಂತೆ ಉಲ್ಲೇಖ (3)ರಲ್ಲಿ ತನಿಖಾ ತಂಡ 12 ಅಂಶಗಳ ಬೇಡಿಕೆಯ ಕುರಿತು ತನಿಖೆ ಮಾಡಿ, ಅದರಲ್ಲಿ ಈ ಕೆಳಗಿನ 04 ಅಂಶಗಳಲ್ಲಿ ಮುಖ್ಯಾಧಿಕಾರಿಗಳು ಕರ್ತವ್ಯಲೋಪ ಎಸಗಿರುತ್ತಾರೆಂದು ವರದಿ ನೀಡಿರುತ್ತಾರೆ.

| ಕ್ರ.ಸಂ | ಆರೋಪಗಳು | ತನಿಖಾಧಿಕಾರಿಗಳ ವರದಿ |
|---|---|---|
| 1 | ಮುಖ್ಯಾಧಿಕಾರಿಗಳು ಪಟ್ಟಣದಲ್ಲಿ ವಾಸ್ತವ್ಯ ಮಾಡಿ ಇಲ್ಲಿಯ ಸಮಸ್ಯೆಗಳು ಅರಿತುಕೊಳ್ಳಬೇಕು. | ಸದರಿಯವರು ಹೆಚ್ಚುವರಿಯಾಗಿ ನಾಲತವಾಡ ಪಟ್ಟಣ ಪಂಚಾಯತಿಯ ಮುಖ್ಯಾಧಿಕಾರಿಯಾಗಿ ಪ್ರಭಾರ ವಹಿಸಿಕೊಂಡು ಅಲ್ಲಿಯೂ ಸಹ ಕೆಲಸ ನಿರ್ವಹಿಸುತ್ತಿರುವದರಿಂದ ನಗರದ ಸಮಸ್ಯೆಗಳಿಗೆ ಸ್ಪಂದಿಸಲು ಆಗಿರುವದಿಲ್ಲ. ಸದರಿಯವರು ಕೇಂದ್ರ ಸ್ಥಾನದಲ್ಲಿದ್ದು, ಕೆಲಸ ನಿರ್ವಹಿಸಬೇಕಾಗಿರುತ್ತದೆ. ಆದರೆ ಸದರಿಯವರು ದಿ:17-07-2022 ರಿಂದ ಪಟ್ಟಣದಲ್ಲಿ ವಾಸ್ತವ್ಯ ಮಾಡುತ್ತಿದ್ದಾರೆ. KCSR-1957ರ ಸಾಮಾನ್ಯ ಸೇವಾ ಷರತ್ತುಗಳು ನಿಯಮ-12ರಿಂದ16 ರಲ್ಲಿಯ ನಿಯಮಗಳನ್ನು ಉಲ್ಲಂಘಿಸಿರುತ್ತಾರೆ. |
| 2 | ಸನ್ 2018ರಲ್ಲಿ ಸುರೇಶ ಕೇಶಟ್ಟಿ ಎಂಬುವರ ಹೆಸರಿನ ವಾಹನ ಬಾಡಿಗೆ | ಮುದ್ದೇಬಿಹಾಳ ಪುರಸಭೆ ಮುಖ್ಯಾಧಿಕಾರಿಗಳು ಶ್ರೀ ಸುರೇಶ ಕೇಶಟ್ಟಿ ಇವರ ಮೂಲಕ ವಾಹನ ಬಾಡಿಗೆ ಪಡೆದಿದ್ದು ಇರುತ್ತದೆ. ಈ ಕುರಿತು ಯಾವುದೇ ಮೂಲ ದಾಖಲಾತಿಗಳನ್ನು ವಿಚಾರಣೆಗೆ ಹಾಜರ ಪಡಿಸಿರುವುದಿಲ್ಲ. ಆದರೆ ಆನ್‌ಲೈನ ದಾಖಲಾತಿಗಳ ಪ್ರಕಾರ ದಿ:23-08-2018 ರಂದು ಶ್ರೀ ಸುರೇಶ |

| | | |
|---|---|---|
| | ತೆಗೆದಿದ್ದು ಅದರ ಕುರಿತು. | ಕೆಸಟ ಇನರಿಗೆ ಚೆಕ್ ನಂ: 021599 ಸಿಂಡಿಕೇಟ ಬ್ಯಾಂಕ್ ಮೊತ್ತ ರೂ. 2,75,000/- ಗಳನ್ನು ಒಂದೇ ಕಂತಿನಲ್ಲಿ ಸಂದಾಯ ಮಾಡಿದ್ದು ಕಂಡು ಬಂದಿರುತ್ತದೆ. ಸದರಿ ಗುತ್ತಿಗೆದಾರರು ಮುಖ್ಯಾಧಿಕಾರಿಯ ಪತಿ ಯಾಗಿರುವದರೆಂದು ತಿಳಿದು ಬಂದಿದೆ. ಅದರಂತೆ ಕೆಟಿಪಿಪಿ ಕಾಯ್ದೆ-1999-2000 ರನ್ವಯ ಒಂದು ಲಕ್ಷ ಮೇಲ್ಪಟ್ಟ ಮೊತ್ತದ ಸೇವೆ ಮತ್ತು ಸಾಮಗ್ರಿಗಳ ಸರಬರಾಜು ಕಾಮಗಾರಿಗಳಿಗೆ ಟೆಂಡರ ಕರೆಯಬೇಕಾಗುತ್ತದೆ ಆದರೆ ಸದರಿ ಕಾಯ್ದೆ ಉಲ್ಲಂಘಿಸಿ ಹಣ ಸಂದಾಯ ಮಾಡಿರುತ್ತಾರೆ. **ಅನುಬಂಧ-3 ಪುಟ ಸಂಖ್ಯೆ: 63 ರಿಂದ 74 ರವರಗೆ ಲಗತ್ತಿಸಲಾಗಿದೆ.** |
| 3 | ಮಳಿಗೆಗಳ ಹರಾಜು ಪ್ರಕ್ರಿಯೆಯಲ್ಲಿ ಲೋಪ ದೋಷಗಳ ಕುರಿತು. | ಈ ಕಾರ್ಯಾಲಯದಿಂದ ದಿ:24-12-2020 ರಂದು ಒಟ್ಟು 92 ಮಳಿಗೆಗಳ ಬಹಿರಂಗ ಹರಾಜು ಮಾಡಲು ಅನುಮೋದನೆ ನೀಡಲಾಗಿರುತ್ತದೆ. ಅದರಂತೆ ಮುಖ್ಯಾಧಿಕಾರಿಗಳು ವಿವಿಧ ದಿನಾಂಕಗಳಂದು 22 ಮಳಿಗೆಗಳನ್ನು ಬಹಿರಂಗ ಹರಾಜು ಮಾಡಿರುತ್ತಾರೆ. ಬಹಿರಂಗವಾಗಿ ಹರಾಜುಗೊಂಡ ಒಟ್ಟು 22 ಮಳಿಗೆ ಗಳಲ್ಲಿ 14 ಮಳಿಗೆಗಳನ್ನು ಲೀಜ್‌ದಾರರಿಗೆ ನೋಂದ ಮಾಡಿ ಹಂಚಿಕೆ ಮಾಡಿರುತ್ತಾರೆ. ಆದರೆ ಲೀಜ್‌ದಾರರಿಗೆ ಹಂಚಿಕೆ ಮಾಡುವ ಮುನ್ನ ಈ ಕಾರ್ಯಾಲಯದಿಂದ ಅನುಮೋದನೆ ಪಡೆದುಕೊಂಡಿರುವುದಿಲ್ಲ. ಬಹಿರಂಗ ಹರಾಜು ಮಡುವ ಪ್ರಕಟಣೆ ಷರತ್ತುಗಳಲ್ಲಿ Right of First Refusal ಬಗ್ಗೆ ವಿವರಣೆ ನೀಡದೇ ಇರುವುದು ಕಂಡುಬಂದಿರುತ್ತದೆ.<br>**ಅನುಬಂಧ-6 ಪುಟ ಸಂಖ್ಯೆ:145-280 ರವರಗೆ ಲಗತ್ತಿಸಲಾಗಿದೆ.** |
| 4 | 2018ರಲ್ಲಿ ಕಾನೂನು ಬಾಹೀರ ಸಾರ್ವಜನಿಕ ಜಾಗೆಗಳನ್ನು 02 ಸಂಸ್ಥೆಗಳಿಗೆ ನೋಂದ ಮಾಡಿದ ಅಧಿಕಾರಿ ಮೇಲ ಕ್ರಮ ಕೈಗೊಳ್ಳುವುದು | 1)ಸದರಿ ಜಾಗೆಯು ಬಾಡಿಗೆದಾರರಿಗೆ ಬಾಡಿಗೆ ಕರಿಕ ನೀಡುವ ಕಾಲಕ್ಕೆ ಉಪನೋಂದಣಾಧಿಕಾರಿಗಳ 1957ರ ಮುದ್ರಾಂಕ ಶುಲ್ಕ ಕಾಯ್ದೆಯನ್ವಯ ನಿಗಧಿಪಡಿಸಿದ ನಿವೇಶನ ಬೆಲೆಯ ಮೇಲೆ ಬಾಡಿಗೆಯನ್ನು ನಿಗಧಿಪಡಿಸಿರುವದಿಲ್ಲ. ಹಾಗೂ ಪಟ್ಟಣಕ್ಕೆ ಸಂಬಂಧಿಸಿದ ಸಹಾಯಕ ನಿರ್ದೇಶಕರು ನಗರ ಯೋಜನಾ ಪ್ರಾಧಿಕಾರದಿಂದ ಮೇಲ್ಕಾಣಿಸಿದ ಜಾಗೆಯ ಬಗ್ಗೆ ಅರ್ಜಿದಾರರಿಗೆ ಮಂಜೂರಿಸುವ ಕುರಿತು ಅಭಿಪ್ರಾಯ ಪಡೆದುಕೊಂಡಿರುವದಿಲ್ಲ.<br>2)ಮಾನ್ಯ ಸರಕಾರದ ಅಧೀನ ಕಾರ್ಯದರ್ಶಿಗಳು ಪೌರಾಡಳಿತ/2 & ಮಂಡಳಿ ನಗರಾಭಿವೃದ್ಧಿ ಇಲಾಖೆ ಬೆಂಗಳೂರು ರವರ ಸುತ್ತೋಲೆ ಸಂಖ್ಯೆ:ನಅಇ/01/ ಟಿಎಂಡಿ/2018 ದಿನಾಂಕ:30-01-2018ರ ಷರತುಗಳನ್ವಯ ನಿವೇಶನವು ಮಂಜೂರಿಸಿರುವುದಿಲ್ಲ.<br>3)ಮುಖ್ಯಾಧಿಕಾರಿಗಳು ಉಪನೋಂದಣಾಧಿಕಾರಿಗಳು ಮುದ್ದೇಬಿಹಾಳ ಇವರಿಗೆ ಪತ್ರ ಬರೆದು ಜಾಗೆಯ ನೋಂದಣಿ ರದ್ದು ಪಡಿಸಲು ಪತ್ರ ಬರೆದಿರುತ್ತಾರೆ. |

| | | |
|---|---|---|
| | | ಆದರೆ ಸದರಿ ಪತ್ರದ ಮೇಲೆ ಯಾವುದೇ ರೀತಿ ಕ್ರಮ ಕೈಕೊಳ್ಳದೇ ಇರುವದು ಕಂಡುಬಂದಿರುತ್ತದೆ. |

ತನಿಖಾಧಿಕಾರಿಗಳು ನೀಡಿದ ವರದಿಯನ್ನು ಪರಿಶೀಲಿಸಲಾಗಿ, ಒಟ್ಟು 12 ಅಂಶಗಳಲ್ಲಿ ಈ ಮೇಲಿನಂತೆ 04 ಅಂಶಗಳಲ್ಲಿ ಶ್ರೀಮತಿ ಎಸ್.ಎಸ್.ಬಾಗಲಕೋಟ ಮುಖ್ಯಾಧಿಕಾರಿ ಪುರಸಭೆ ಮುದ್ದೇಬಿಹಾಳ ಇವರು ಕರ್ತವ್ಯಲೋಪ/ಅಧಿಕಾರ ದುರ್ಬಳಕೆ ಮಾಡಿಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿದ್ದು, ಕಾರಣ ತನಿಖಾಧಿಕಾರಿಗಳು ನೀಡಿದ ವರದಿಯನ್ನು ಈ ಪತ್ರದೊಂದಿಗೆ ಲಗತ್ತಿಟ್ಟು ಶ್ರೀಮತಿ ಎಸ್.ಎಸ್.ಬಾಗಲಕೋಟ ಮುಖ್ಯಾಧಿಕಾರಿ ಪುರಸಭೆ ಮುದ್ದೇಬಿಹಾಳ ಇವರ ಮೇಲೆ ಶಿಸ್ತು ಕ್ರಮ ಜರುಗಿಸಲು ಮಾನ್ಯರವರಲ್ಲಿ ಆದರಪೂರ್ವಕವಾಗಿ ಸಲ್ಲಿಸಿದೆ.

"ಗೌರವಗಳೊಂದಿಗೆ"

ತಮ್ಮ ವಿಶ್ವಾಸಿ,

ಜಿಲ್ಲಾಧಿಕಾರಿ,
ವಿಜಯಪುರ.

ಮಾನ್ಯ ಜಿಲ್ಲಾಧಿಕಾರಿಗಳು ವಿಜಯಪುರ ಜಿಲ್ಲೆ:ವಿಜಯಪುರ ಇವರ ಆದೇಶದ ದಿನಾಂಕ:29-07-2022 ರನ್ವಯ ಮುದ್ದೇಬಿಹಾಳ ಪುರಸಭೆಯಲ್ಲಿ ನಡೆದಿರುವ 12 ಅಂಶಗಳ ಕುರಿತು ತನಿಖೆ ನಡೆಸಿ ವರದಿ ಸಲ್ಲಿಸುವ ಕುರಿತು ಆದೇಶಿಸಿರುವಂತೆ, ಸಂಬಂಧಿಸಿದ ಅಂಶಗಳ ಕುರಿತು ಮುದ್ದೇಬಿಹಾಳ ಪುರಸಭೆಯಲ್ಲಿದ್ದ ಕಡತಗಳಲ್ಲಿ ಲಭ್ಯವಿದ್ದ ದಾಖಲಾತಿಗಳನ್ನು ಪರಿಶೀಲಿಸಿ, ಸಲ್ಲಿಸಿರುವ ವರದಿ.

(ಕರ್ನಾಟಕ ಸರ್ಕಾರ)

ಜಿಲ್ಲಾ ನಗರಾಭಿವೃದ್ಧಿ ಕೋಶ,
ವಿಜಯಪುರ.

ಕರ್ನಾಟಕ ಸರ್ಕಾರ
ಸತ್ಯಮೇವ ಜಯತೇ

ಜಿಲ್ಲಾಧಿಕಾರಿಗಳ ಕಚೇರಿ
[illegible], ವಿಜಯಪುರ.

Phone 08352-250855, E-mail: dstaff_dudc_bijapur@yahoo.co.in & dudc_bjp@[illegible].co.in

ವಿಷಯ: ಮುದ್ದೇಬಿಹಾಳ ಪುರಸಭೆ ಕಾರ್ಯಾಲಯದ ತಪಾಸಣೆ ಕೈಗೊಳ್ಳುವ ಬಗ್ಗೆ.

ಉಲ್ಲೇಖ: 1) ಶ್ರೀ ಮಹಿಬೂಬ ಎಲ್. ಗೊಳಸಂಗಿ, ಶ್ರೀ ಶಿವು ಶಿವಪುರ [illegible] ಪುರಸಭೆ ಮುದ್ದೇಬಿಹಾಳ ಇವರ ಪತ್ರ ದಿ:16-07-2022.

2) ಅಧ್ಯಕ್ಷರು, ಪುರಸಭೆ ಮುದ್ದೇಬಿಹಾಳ ರವರ ಪತ್ರ ದಿ:21-07-2022.

-0-0-

ಪ್ರಸ್ತಾವನೆ:

ಮುದ್ದೇಬಿಹಾಳ ಪುರಸಭೆಯಲ್ಲಿ ಮುಖ್ಯಾಧಿಕಾರಿಗಳ ಅವ್ಯವಹಾರದ ಕುರಿತು 12 ಅಂಶಗಳಿಗೆ ತನಿಖೆ ನಡೆಸಿ ತಪ್ಪಿತಸ್ಥ ಅಧಿಕಾರಿಗಳ/ಸಿಬ್ಬಂದಿಗಳ ವಿರುದ್ಧ ಕ್ರಮ ಕೈಗೊಳ್ಳಲು ಉಲ್ಲೇಖ (1)&(2)ರನ್ವಯ ಈ ಕಾರ್ಯಾಲಯಕ್ಕೆ ಮನವಿ ಸಲ್ಲಿಸಿರುತ್ತಾರೆ.

ಮುದ್ದೇಬಿಹಾಳ ಪುರಸಭೆಯಲ್ಲಿ ಮುಖ್ಯಾಧಿಕಾರಿಗಳ ಅವ್ಯವಹಾರದ ಕುರಿತು 12 ಅಂಶಗಳಿಗೆ ಸಂಬಂಧಿಸಿದಂತೆ ಸಮಗ್ರವಾಗಿ ತನಿಖೆ ಕೈಗೊಂಡು ಕರ್ತವ್ಯ ಲೋಪ ಎಸಗಿರುವ ಬಗ್ಗೆ ವರದಿ ಪಡೆದುಕೊಳ್ಳಲು ತನಿಖಾ ತಂಡ ರಚಿಸುವುದು ಅವಶ್ಯಕತೆ ಇರುವುದನ್ನು ಮನಗಂಡು, ತನಿಖೆ ನಡೆಸಲು ಅಧಿಕಾರಿ/ಸಿಬ್ಬಂದಿಗಳನ್ನು ನೇಮಿಸುವುದು ಸೂಕ್ತವೆಂದು ತಿಳಿದು ಈ ಕೆಳಕಂಡಂತೆ ಆದೇಶ.

**: ಆದೇಶ :**

ಕ್ರ:ಜಿನಕೋ-1/ಸಿಬ್ಬಂದಿ/ಕಚೇರಿ ತಪಾಸಣೆ/2022-23 ದಿನಾಂಕ: 29-07-2022

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ಮುದ್ದೇಬಿಹಾಳ ಪುರಸಭೆಯಲ್ಲಿ ಮುಖ್ಯಾಧಿಕಾರಿಗಳ ಅವ್ಯವಹಾರದ ಕುರಿತು 12 ಅಂಶಗಳಿಗೆ ಸಮಗ್ರವಾಗಿ ತನಿಖೆ ಕೈಗೊಂಡು ಕರ್ತವ್ಯ ಲೋಪ ಎಸಗಿರುವ ಬಗ್ಗೆ ವರದಿ ನೀಡಲು ಈ ಕೆಳಕಾಣಿಸಿದ ಅಧಿಕಾರಿ/ಸಿಬ್ಬಂದಿಗಳನ್ನು ನೇಮಿಸಿ ಆದೇಶಿಸಿದೆ.

| ಅ.ನಂ. | ಅಧಿಕಾರಿ/ನೌಕರರ ಹೆಸರು ಮತ್ತು ಪದನಾಮ |
|---|---|
| 01 | ಶ್ರೀ: ಅನಿಲಕುಮಾರ ಮುದ್ದಾ ಸಹಾಯಕ ಕಾರ್ಯಪಾಲಕ ಅಭಿಯಂತರರು, ಜಿ.ನ.ಕೋ. ವಿಜಯಪುರ |
| 02 | ಶ್ರೀ ರಮೇಶ ಪಿ ಜಾಧವ, ಕಂದಾಯ ಅಧಿಕಾರಿ (ಮುಖ್ಯಾಧಿಕಾರಿ ಶ್ರೇಣಿ-1) ಮಹಾನಗರ ಪಾಲಿಕೆ, ವಿಜಯಪುರ. |
| 03 | ಶ್ರೀ ಜಿ.ಕೆ.ಕಲಬುರ್ಗಿ, ಪ್ರ.ದ.ಸ. ಮಹಾನಗರ ಪಾಲಿಕೆ, ವಿಜಯಪುರ. |

ಜಿಲ್ಲಾಧಿಕಾರಿ,
ವಿಜಯಪುರ.

ಪ್ರತಿ:

1) ಆಯುಕ್ತರು, ಮಹಾನಗರ ಪಾಲಿಕೆ, ವಿಜಯಪುರ ರವರಿಗೆ ಮಾಹಿತಿಗಾಗಿ.
2) ಮುಖ್ಯಾಧಿಕಾರಿ ಪುರಸಭೆ ಮುದ್ದೇಬಿಹಾಳ ಇವರಿಗೆ ಸಂಬಂಧಿಸಿದ ತಪಾಸಣಾ ತಂಡಕ್ಕೆ ಅವಶ್ಯಕ ದಾಖಲೆಗಳನ್ನು ಒದಗಿಸಿ ತಪಾಸಣೆ ಸೂಕ್ತವಾಗಿ ಜರುಗಿಸಲು ಹಾಗೂ ಕಚೇರಿಯ ಎಲ್ಲಾ ಸಿಬ್ಬಂದಿಯವರಿಗೆ ತಪಾಸಣೆ ವೇಳೆಯಲ್ಲಿ ಹಾಜರಿರಲು ತಿಳಿಸಲು ಕ್ರಮ ಜರುಗಿಸತಕ್ಕದ್ದು.
3) ಸಂಬಂಧಿಸಿದ ಅಧಿಕಾರಿ/ಸಿಬ್ಬಂದಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಹಾಗೂ ತಪಾಸಣೆ ಕೈಗೊಂಡ ವರದಿಯನ್ನು ದಿನಾಂಕ:08-08-2022ರ ಒಳಗಾಗಿ ಈ ಕಾರ್ಯಾಲಯಕ್ಕೆ ಸಲ್ಲಿಸಲು ಸೂಚಿಸಿದೆ

ಮಾನ್ಯ ಜಿಲ್ಲಾಧಿಕಾರಿಗಳು ವಿಜಯಪುರ ಜಿಲ್ಲೆ:ವಿಜಯಪುರ ಇವರ ಆದೇಶದ ದಿನಾಂಕ: 29-07-2022 ರಲ್ಲಿ ಮುದ್ದೇಬಿಹಾಳ ಪುರಸಭೆಯಲ್ಲಿ ನಡೆದಿರುವ 12 ಅಂಶಗಳ ಕುರಿತು ತನಿಖೆ ನಡೆಸಿ ವರದಿ ಸಲ್ಲಿಸುವ ಕುರಿತು ಆದೇಶಿಸಿರುವಂತೆ ಈ ಕೆಳಗಿನ ಅನುಬಂಧದಲ್ಲಿ ಸಂಬಂಧಿಸಿದ ಅಂಶಗಳ ಕುರಿತು ಮುದ್ದೇಬಿಹಾಳ ಪುರಸಭೆಯಲ್ಲಿದ್ದ ಕಡತಗಳಲ್ಲಿ ಲಭ್ಯವಿದ್ದ ದಾಖಲಾತಿಗಳನ್ನು ಪರಿಶೀಲಿಸಿ, ಸಲ್ಲಿಸಿರುವ ವರದಿಯ ವಿವರಗಳು ಈ ಕೆಳಗಿನಂತಿವೆ.

| ಅ.ನಂ | ಆಕ್ಷೇಪಣೆ | ವಿಚಾರಣೆ |
|---|---|---|
| 1 | ಮುಖ್ಯಾಧಿಕಾರಿಗಳು ಪಟ್ಟಣದಲ್ಲಿ ವಾಸ್ತವ್ಯ ಮಾಡಿ ಇಲ್ಲಿಯ ಸಮಸ್ಯೆಗಳು ಅರಿತುಕೊಳ್ಳಬೇಕು. | ಶ್ರೀಮತಿ ಎಸ್ ಎಸ್ ಬಾಗಲಕೋಟ ಮುಖ್ಯಾಧಿಕಾರಿಗಳು ಪುರಸಭೆ ಮುದ್ದೇಬಿಹಾಳ ಪುರಸಭೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದು, ಸದರಿಯವರು ದಿನಾಂಕ:17-07-2022 ರಿಂದ ಪಟ್ಟಣದಲ್ಲಿ ವಾಸ್ತವ್ಯ ಮಾಡುತ್ತಿದ್ದು ಹಾಗೂ ಪಟ್ಟಣದ ಸ್ವಚ್ಛತೆ ಹಾಗೂ ನೈರ್ಮಲೀಕರಣ ಮತ್ತು ಇನ್ನಿತರ ಅಭಿವೃದ್ಧಿ ಕಾಮಗಾರಿಗಳ ಮೇಲ್ವಿಚಾರಣೆ ಮಾಡುತ್ತಿದ್ದೇನೆ ಅಂತಾ ತಿಳಿಸಿರುತ್ತಾರೆ. ಇದು ಅಲ್ಲದೆ ಹೆಚ್ಚುವರಿಯಾಗಿ ನಲವತ್ತವಾಡ ಪಟ್ಟಣಪಂಚಾಯಿತಿಯ ಮುಖ್ಯಾಧಿಕಾರಿಯಾಗಿ ಪ್ರಭಾರ ವಹಿಸಿಕೊಂಡು ಅಲ್ಲಿಯು ಸಹ ಕೆಲಸ ನಿರ್ವಹಿಸುತ್ತಿರುವದರಿಂದ ನಗರದ ಸಮಸ್ಯೆಗಳಿಗೆ ಸ್ಪಂದಿಸಲು ಆಗಿರುವದಿಲ್ಲ. ಸದರಿಯವರು ಕೆಸಿಎಸ್‌ಆರ್-1957 ರೂಲ್ ಪ್ರಕಾರ ಅಧಿಕಾರಿ/ನೌಕರರು ಕೇಂದ್ರ ಸ್ಥಾನದಲ್ಲಿದ್ದು, ಕೆಲಸ ನಿರ್ವಹಿಸಬೇಕಾಗಿರುತ್ತದೆ.<br>ಕೆ.ಸಿ.ಎಸ್.ಆರ್ 1957ರ ಸಾಮಾನ್ಯ ಸೇವಾ ಶರತ್ತುಗಳು ನಿಯಮ 12 ರಿಂದ 16 ರಲ್ಲಿಯ ನಿಯಮಗಳನ್ನು ಉಲ್ಲಂಘಿಸಿರುತ್ತಾರೆ.<br>ಅನುಬಂಧ – ಪುಟ ಸಂಖ್ಯೆ:0 ರಿಂದ 0 ರವರಗೆ ಲಗತ್ತಿಸಲಾಗಿದೆ. |

**ತನಿಖಾಧಿಕಾರಿಗಳು**

| | | |
|---|---|---|
| ಶ್ರೀ ಜಿ.ಕೆ.ಕಲಬುರ್ಗಿ ಪ್ರ.ದ.ಸ<br>ಮಹಾನಗರಪಾಲಿಕೆ, ವಿಜಯಪುರ | ಶ್ರೀ ಆರ್.ಪಿ.ಜಾಧವ ವಲಯ ಆಯುಕ್ತರು<br>ಮಹಾನಗರಪಾಲಿಕೆ, ವಿಜಯಪುರ | ಶ್ರೀ ಅನೀಲಕುಮಾರ ಮುದ್ದಾ ಸ.ಕಾ.ಅಭಿಯಂತರರು<br>ಜಿಲ್ಲಾ ನಗರಾಭಿವೃದ್ಧಿಕೋಶ ವಿಜಯಪುರ |

| ಅ.ನಂ | ಆಕ್ಷೇಪಣೆ | ವಿಚಾರಣೆ |
|---|---|---|
| 2 | ಪಟ್ಟಣದಲ್ಲಿ ಯಾವುದೇ ರೀತಿ ಅಭಿವೃದ್ಧಿ ಕಾಮಗಾರಿ ನಡೆದರೂ ಇಲ್ಲಿಯ ವರೆಗೆ ಯಾವುದೇ ಆಡಳಿತ ಮಂಡಳ ಗಮನಕ್ಕೆ ತಂದಿರುವುದಿಲ್ಲ ಹಾಗೂ ಅನುಮತಿ ತೆಗೆದು ಕೊಳ್ಳುವುದಿಲ್ಲ. | 1) ಸನ್ 2016-17, 2017-18 ನೇ ಸಾಲಿನ 14 ನೇ ಹಣಕಾಸು ಆಯೋಗದ ಪಾಲಿಕೆಯ ಮೂಲ ಅನುದಾನದಲ್ಲಿ ಹಂಚಿಕೆಯಾದ ಅನುದಾನದಲ್ಲಿ ಬಾಕಿ ಉಳಿದ ಅನುದಾನದಲ್ಲಿ ತಯಾರಿಸಿದ ಕ್ರಿಯಾಯೋಜನೆ ತಯಾರಿಸುವ ಕುರಿತು ದಿನಾಂಕ: 16-02-2021 ರಂದು ಜರುಗಿದ ಸಾಮಾನ್ಯ ಸಭೆ ಠರಾವು ಸಂಖ್ಯೆ: 24 ರಲ್ಲಿ ನಿರ್ಣಯ ಅಂಗೀಕರಿಸಲಾಗಿರುತ್ತದೆ.<br>2) ಸನ್ 2020-21 ನೇ ಸಾಲಿನ 15ನೇ ಹಣಕಾಸು ಮೂಲ ಅನುದಾನ 2020-21 ನೇ ಸಾಲಿನ ಎಸ್‌ಎಫ್‌ಸಿ ಅನುದಾನದಲ್ಲಿ ಶೇ 24.10% ಅನುದಾನಕ್ಕೆ ಹಾಗೂ ಸನ್ 2018-19ನೇ ಸಾಲಿನ 14ನೇ ಹಣಕಾಸು ಬೆಸಿಕ್ ಗ್ರ್ಯಾಂಟ್ ಅನುದಾನದಲ್ಲಿ ಬಿಡುಗಡೆಯಾದ ಮೊತ್ತಕ್ಕೆ ರೂ. ಪ್ರಚುರ ಪಡಿಸಿದ ಇ-ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್ ಸಲ್ಲಿಸುವ ಹಾಗೂ ಟೆಂಡರ್ ಸೂಚಿಸಿದ ಗುತ್ತಿಗೆದಾರರ ವಿವರ ಮತ್ತು ದರವಾರುಗಳಿಗೆ ಮಂಜೂರಾತಿ ಕುರಿತು ಠರಾವು ನಂ: 26 ದಿನಾಂಕ: 16-02-2021 ರ ಸಾಮಾನ್ಯ ಸಭೆಯಲ್ಲಿ ಟೆಂಡರ್‌ದಾರುಗಳಿಗೆ ಮಂಜೂರಾತಿ ನೀಡಿ ಕಾಮಗಾರಿ ಕೈಗೊಳ್ಳಲು ಮುಖ್ಯಾಧಿಕಾರಿ ಪುರಸಭೆ ಇವರಿಗೆ ಸೂಚಿಸಿ ಠರಾವು ಅಂಗೀಕರಿಸಲಾಗಿದೆ.<br>3) ಸನ್ 2022-23ನೇ ಸಾಲಿನ 15ನೇ ಹಣಕಾಸು ಯೋಜನೆ ಅಡಿ ಸಾಮಾನ್ಯ ಮೂಲ ಅನುದಾನದಲ್ಲಿ ಹಂಚಿಕೆಯಾದ ಅನುದಾನಕ್ಕೆ ಕ್ರಿಯಾ ಯೋಜನೆಯನ್ನು ತಯಾರಿಸಿ ದಿನಾಂಕ: 27-06-2022 ರಂದು ನಡೆದ ಸಾಮಾನ್ಯ ಸಭೆಯಲ್ಲಿ ಮಂಡಿಸಿ ಒಟ್ಟು ರೂಪಾಯಿ 150 ಲಕ್ಷಗಳ ಕಾಮಗಾರಿಗಳಿಗೆ ಮಂಜೂರಾತಿ ನೀಡಿರುತ್ತಾರೆ ಹಾಗೂ ಮುದ್ದೆಬಿಹಾಳ ಪಟ್ಟಣದ ಶಿರೂಳ ರಸ್ತೆಯ ಅಭಿವೃದ್ಧಿ ಕಾಮಗಾರಿಯು ಲೋಕೋಪಯೋಗಿ ಇಲಾಖೆಯಿಂದ ಕೈಗೊಂಡಿದ್ದು ಸಹ ಸಭೆಯಲ್ಲಿ ಚರ್ಚಿಸಿ ನಿರ್ಣಯ ಅಂಗೀಕರಿಸಿರುತ್ತಾರೆ.<br>**ಅನುಬಂಧ – 1 ಪುಟ ಸಂಖ್ಯೆ: 01 ರಿಂದ 44 ರವರಗೆ ಲಗತ್ತಿಸಲಾಗಿದೆ.** |

**ತನಿಖಾಧಿಕಾರಿಗಳು**

ಶ್ರೀ ಬಿ.ಕೆ ಕಲಬುರ್ಗಿ ಪ್ರ.ದ.ಸ
ಮಹಾನಗರಪಾಲಿಕೆ, ವಿಜಯಪುರ

ಶ್ರೀ ಆರ್.ಪಿ.ಜಾಧವ ವಲಯ ಆಯುಕ್ತರು
ಮಹಾನಗರಪಾಲಿಕೆ, ವಿಜಯಪುರ

ಶ್ರೀ ಅನೀಲಕುಮಾರ ಮುದ್ದಾ ಸ.ಕಾ.ಅಭಿಯಂತರರು
ಜಿಲ್ಲಾ ನಗರಾಭಿವೃದ್ಧಿಕೋಶ ವಿಜಯಪುರ

| ಅನುಬಂಧ "1" | | |
|---|---|---|
| ಆಕ್ಷೇಪಣೆ ಕ್ರ.ಸಂಖ್ಯೆ | ವಿಷಯ/ವಿವರ | ಪುಟ ಸಂಖ್ಯೆ |
| 2 | 1) ಮುದ್ದೆಬಿಹಾಳ ಪುರಸಭೆಯ ಠರಾವ ನಂ 24 ದಿನಾಂಕ 16-02-2022<br>2)ಮುದ್ದೆಬಿಹಾಳ ಪುರಸಭೆಯ ಠರಾವ ನಂ 26 ಮತ್ತು 28 ದಿ:27-06-2022<br>ಮತ್ತು ಮಾನ್ಯ ಜಿಲ್ಲಾಧಿಕಾರಿಗಳಿಗೆ ನೀಡಿರುವ ಕ್ರಿಯಾ ಯೋಜನೆ ಪ್ರಸ್ತಾವನೆ. | 1 ರಿಂದ 44 |

7

**ಅ.ನಂ** **ಆಕ್ಷೇಪಣೆ** **ವಿಚಾರಣೆ**

3 ಪಟ್ಟಣದಲ್ಲಿ ಸಾರ್ವಜನಿಕರಿಗೆ ಆಸ್ತಿ ಉತಾರೆ ಸಲುವಾಗಿ ತುಂಬಾ ವಿಳಂಭವಾಗುತ್ತಿದ್ದು ಅವರಿಗೆ ತುರ್ತು ಸೇವೆ ಒದಗಿಸುವ ಕುರಿತು.

ಮಾನ್ಯ ನಿರ್ದೇಶಕರು ಪೌರಾಡಳಿತ ನಿರ್ದೇಶನಾಲಯ ಬೆಂಗಳೂರು ಇವರ ಸುತೋಲೆ ಸಂಖ್ಯೆ: ಡಿಎಂಎ 29 ಪಿಟಿಐಎಸ್/2015-16 ದಿ: 20-04-2016 ರಲ್ಲಿ ತಿಳಿಸಿರುತವಂತೆ ಹೊಸದಾಗಿ ಅಭಿವೃದ್ಧಿ ಪಡಿಸಿರುವ ಇ-ಆಸ್ತಿ ತಂತ್ರಾಂಶವನ್ನು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಉಪಯೋಗಿಸುವ ಕುರಿತು ಸದರಿ ಸುತ್ತೋಲೆಯಂತೆ ಆಸ್ತಿಗೆ ಸಂಬಂಧಿಸಿದ ದಾಖಲಾತಿಗಳನ್ನು ಅರ್ಜಿದಾರರಿಂದ ಪಡೆದುಕೊಂಡು ಇ-ಆಸ್ತಿ ತಂತ್ರಾಂಶದಲ್ಲಿ ದಾಖಲಿಸಿ ನಮೂನೆ-3ನ್ನು ವಿತರಿಸಲು ಸೂಚಿಸಿರುತ್ತಾರೆ. ಸದರಿ ಪುರಸಭೆಯಲ್ಲಿ ಎಪ್ರಿಲ್-2022 ರಿಂದ ಇಲ್ಲಿಯವರೆಗೆ ಒಟ್ಟು ಅರ್ಜಿಗಳ ಮೇಲೆ ಕ್ರಮಕೈಗೊಂಡು ಇ-ಆಸ್ತಿ ಉತಾರೆಗಳನ್ನು ವಿತರಿಸಿರುತ್ತಾರೆ. ಸಧ್ಯಕ್ಕೆ 8 ಉತಾರೆಗಳು ವಿತರಿಸುವುದು ಬಾಕಿ ಇರುತ್ತದೆ. ಇದರಿಂದ ಸಾರ್ವಜನಿಕರಿಗೆ ಉತಾರೆ ಪೂರೈಸುವಲ್ಲಿ ವಿಳಂಬವಾಗಿರುತ್ತದೆ. ವಿವರ ಈ ಕೆಳಗಿನಂತೆ ಇರುತ್ತದೆ.

| ಕ್ರ.ಸಂ | ಮಾಹೆ | ಸ್ವೀಕೃತಗೊಂಡ ಅರ್ಜಿ | ವಿಲೇವಾರಿವಾದ ಅರ್ಜಿ | ಬಾಕಿ |
|---|---|---|---|---|
| 1 | ಎಪ್ರಿಲ್-2022 | 13 | 13 | 00 |
| 2 | ಮೇ-2022 | 59 | 59 | 00 |
| 3 | ಜೂನ-2022 | 159 | 158 | 01 |
| 4 | ಜುಲೈ-2022 | 78 | 73 | 05 |
| 5 | ಆಗಸ್ಟ-2022 (ದಿ: 04-08-2022 ವರೆಗೆ) | 10 | 08 | 02 |
| | ಒಟ್ಟು= | 319 | 311 | 08 |

ಅನುಬಂಧ – 2 ಪುಟ ಸಂಖ್ಯೆ: 45 ರಿಂದ 62 ರವರಗೆ ಲಗತ್ತಿಸಲಾಗಿದೆ.

**ತನಿಖಾಧಿಕಾರಿಗಳು**

ಶ್ರೀ ಜಿ.ಕೆ.ಕಲಬುಗಿ ಪ್ರ.ದ.ಸ
ಮಹಾನಗರಪಾಲಿಕೆ, ವಿಜಯಪುರ

ಶ್ರೀ ಆರ್.ಪಿ.ಜಾಧವ ವಲಯ ಆಯುಕ್ತರು
ಮಹಾನಗರಪಾಲಿಕೆ, ವಿಜಯಪುರ

ಶ್ರೀ ಅನೀಲಕುಮಾರ ಮುದ್ದಾ ಸ.ಕಾ.ಅಭಿಯಂತರರು
ಜಿಲ್ಲಾ ನಗರಾಭಿವೃದ್ಧಿಕೋಶ ವಿಜಯಪುರ

| ಅನುಬಂಧ "2" | | |
|---|---|---|
| ಆಕ್ಷೇಪಣೆ ಕ್ರ.ಸಂಖ್ಯೆ | ವಿಷಯ/ವಿವರ | ಪುಟ ಸಂಖ್ಯೆ |
| 3 | ಮುದ್ದೇಬಿಹಾಳ ಪುರಸಭೆಯಲ್ಲಿ ಸಕಾಲ ಯೋಜನೆಡಿಯಲ್ಲಿ ಸ್ವೀಕೃತಗೊಂಡ ಹಾಗೂ ವಿಲೇವಾರಿ ಯಾದ ಮತ್ತು ಬಾಕಿ ಉಳಿದ ತಂತ್ರಾಂಶದಲ್ಲಿರುವ ವಿವರ | 45 ರಿಂದ 62 |

| ಅ.ನಂ | ಆಕ್ಷೇಪಣೆ | ವಿಚಾರಣೆ |
| --- | --- | --- |
| 4 | ಸನ್ 2018 ರಲ್ಲಿ ಸುರೇಶ ಕೆಸೆಟ್ಟಿ ಎಂಬುವರ ಹೆಸರಿನ ವಾಹನ ಬಾಡಿಗೆ ತೆಗೆದಿದ್ದು ಅದರ ಕುರಿತು. | ಮುದ್ದೇಬಿಹಾಳ ಪುರಸಭೆ ಮುಖ್ಯಾಧಿಕಾರಿಗಳು ಶ್ರೀ ಸುರೇಶ ಕೆಸಟ್ಟಿ ಇವರ ಮೂಲಕ ವಾಹನ ಬಾಡಿಗೆ ಪಡೆದಿದ್ದು ಇರುತ್ತದೆ. ಈ ಕುರಿತು ಯಾವುದೇ ಮೂಲ ದಾಖಲಾತಿಗಳನ್ನು ವಿಚಾರಣೆಗೆ ಹಾಜರ ಪಡಿಸಿರುವುದಿಲ್ಲ. ಆದರೆ ಆನ್‌ಲೈನ ದಾಖಲಾತಿಗಳ ಪ್ರಕಾರ ದಿ:23-08-2018 ರಂದು ಶ್ರೀ ಸುರೇಶ ಕೆಸಟಿ ಇವರಿಗೆ ಚೆಕ್ ನಂ: 021599 ಸಿಂಡಿಕೇಟ ಬ್ಯಾಂಕ್ ಮೊತ್ತ ರೂ. 2,75,000/- ಗಳನ್ನು ಒಂದೇ ಕಂತಿನಲ್ಲಿ ಸಂದಾಯ ಮಾಡಿದ್ದು ಕಂಡು ಬಂದಿರುತ್ತದೆ. ಸದರಿ ಗುತ್ತಿಗೆದಾರರು ಮುಖ್ಯಾಧಿಕಾರಿಯ ಪತಿ ಯಾಗಿರುವದರೆಂದು ತಿಳಿದು ಬಂದಿದೆ. ಅದರಂತೆ ಕೆಟಿಪಿಪಿ ಕಾಯ್ದೆ-1999-2000 ರನ್ವಯ ಒಂದು ಲಕ್ಷ ಮೇಲ್ಪಟ್ಟ ಮೊತ್ತದ ಸೇವೆ ಮತ್ತು ಸಾಮಗ್ರಿಗಳ ಸರಬರಾಜು ಕಾಮಗಾರಿಗಳಿಗೆ ಟೆಂಡರ ಕರೆಯಬೇಕಾಗುತ್ತದೆ ಆದರೆ ಸದರಿ ಕಾಯ್ದೆ ಉಲ್ಲಂಘಿಸಿ ಹಣ ಸಂದಾಯ ಮಾಡಿರುತ್ತಾರೆ.<br>**ಅನುಬಂಧ -3 ಪುಟ ಸಂಖ್ಯೆ: 63 ರಿಂದ 74 ರವರಗೆ ಲಗತ್ತಿಸಲಾಗಿದೆ.** |

**ತನಿಖಾಧಿಕಾರಿಗಳು**

ಶ್ರೀ ಜಿ.ಕೆ ಕಲಬುರ್ಗಿ ಪ್ರ.ದ.ಸ
ಮಹಾನಗರಪಾಲಿಕೆ, ವಿಜಯಪುರ

ಶ್ರೀ ಆರ್.ಪಿ.ಜಾಧವ ವಲಯ ಆಯುಕ್ತರು
ಮಹಾನಗರಪಾಲಿಕೆ, ವಿಜಯಪುರ

ಶ್ರೀ ಅನೀಲಕುಮಾರ ಮುದ್ದಾ ಸ.ಕಾ.ಅಭಿಯಂತರರು
ಜಿಲ್ಲಾ ನಗರಾಭಿವೃದ್ಧಿಕೋಶ ವಿಜಯಪುರ

| ಅನುಬಂಧ "ತ" | | |
|---|---|---|
| ಆಕ್ಷೇಪಣೆ ಕ್ರ.ಸಂಖ್ಯೆ | ವಿಷಯ/ವಿವರ | ಪುಟ ಸಂಖ್ಯೆ |
| 4 | 1) ವಾಹನ ಭಾಡಿಗೆ ಆಧಾರದ ಮೇಲೆ ಕರೆಯುವ ಮಂಜೂರಿ ನೀಡಿದ ಸಾಮಾನ್ಯ ಸಭೆಯ ಠರಾವ ನಂ.50 ದಿನಾಂಕ 15-04-2016 | 63 ರಿಂದ 74 |
| | 2)ವಾಹನ ಭಾಡಿಗೆ ಬಿಲ್ಲ ಸಂದಾಯ ಮಾಡಲು ಮಂಜೂರಿ ನೀಡಿದ ಸಾಮಾನ್ಯ ಸಭೆಯ ಠರಾವ ನಂ 174/2 ದಿನಾಂಕ 21-07-2018. | |
| | 3) ಲೇಕ್ಕ ಶಾಖೆಯ ತಂತ್ರಾಂಶದಲ್ಲಿ ದಾಖಲಿಸಿದ ಬಿಲ್ಲು ಸಂದಾಯ ನೀಡಿದ್ದರ ವೋಚರ್ | |
| | 4) ಕಛೇರಿ ವಾಹನ ದಾಖಲಾತಿ ನಕಲು ಪ್ರತಿಗಳು ಮತ್ತು ವಾಹನ ಭಾಡಿಗೆ ನಿಗಧಿ ಪಡಿಸಿದ ಸರಕಾರಿ ದಿನಾಂಕ 31-03-2022ರ ನಕಲು | |

| ಅ.ನಂ | ಆಕ್ಷೇಪಣೆ | ವಿಚಾರಣೆ |
|---|---|---|
| | | ಪುರಸಭೆ ಮುದ್ದೇಬಿಹಾಳ ಪಟ್ಟಣದ ವ್ಯಾಪ್ತಿಯ ಸರ್ವೆ ನಂ 73 ರಲ್ಲಿಯ 12 ಎಕರೆ. 11 ಗುಂಟೆ ಜಾಗೆಯು ಪಹಣಿ ಪತ್ರಿಕೆ ಪ್ರಕಾರ ಮುಖ್ಯಾಧಿಕರಿಗಳು ಪುರಸಭೆ ಮುದ್ದೇಬಿಹಾಳ ರವರ ಹೆಸರಿನಲ್ಲಿದ್ದು ಪ್ರಸ್ತುತ ಜಮೀನನ್ನು ವಾಜಪೇಯಿ ನಿವೇಶನ ಯೋಜನೆಯಡಿ ನಿವೇಶನ ರಹಿತರಿಗೆ ನಿವೇಶನ ಹಂಚಿಕೆ ಮಾಡಲು ಮಂಜೂರಿಸಲಾಗಿದ್ದು ಸದರಿ ಜಮೀನು ಲೀಜ್ ಕೊಡಲು ಮತ್ತು ಬೇರೆ ಯಾವುದೇ ಉದ್ದೇಶಕ್ಕೆ ಉಪಯೋಗಿಸಬಾರದಾಗಿ ಹಕ್ಕುಗಳ ಕಾಲಂನಲ್ಲಿ ನಮೂದಿಸಿದ್ದು ಇರುತ್ತದೆ. |
| ೮ | ಸರ್ವೆ ನಂ: 73ರಲ್ಲಿ 2018 ರಲ್ಲಿ ಆಶ್ರಯ ಸಮಿತಿ ಅಧ್ಯಕ್ಷರು 346 ಫಲಾನುಭವಿಗಳ ಆಯ್ಕೆ ಮಾಡಿದ್ದು ಅವರಿಗೆ ಹಕ್ಕು ಪತ್ರ ವಿತರಿಸಬೇಕು ಹಾಗೂ ಸರ್ವೆ ನಂಬರನ್ನು ಕೊಳಚೆ ಅಭಿವೃದ್ಧಿ ಮಂಡಳ ವಿಜಯಪುರ ಇವರಿಗೆ ಹಸ್ತಾಂತಯರಿಸಬಾರದು. | ದಿನಾಂಕ: 07-03-2018 ರಂದು ಪಟ್ಟಣದಲ್ಲಿಯ ನಿವೇಶನ ರಹಿತ ಅರ್ಹ 346 ಫಲಾನುಭಾವಿಗಳನ್ನು ಆಶ್ರಯ ಸಮೀತಿ ಮೂಲಕ ಆಯ್ಕೆ ಮಾಡಲಾಗಿದೆ. ಅವರಿಗೆ ಇಲ್ಲಿಯವರೆಗೆ ಹಕ್ಕು ಪತ್ರ ವಿತರಿಸದೆ ಸುಮಾರು 5 ವರ್ಷಗಳು ಗತಿಸಿವೆ. ಈ ಫಲಾನುಭವಿಗಳಲ್ಲಿ 5 ವರ್ಷ ಅವಧಿಯಲ್ಲಿ ವಿವಿಧ ವಸತಿ ಯೋಜನೆಡಿಯಲ್ಲಿ ಸೌಲಭ್ಯ ಪಡೆದಿರುವ ಹಾಗೂ ಮರಣ ಹೊಂದಿದ ಹಾಗೂ ಸ್ಥಳಾಂತರವಾಗಿರುಬಹುದಾಗಿದ್ದು ಕಾರಣ ಪುನಃ ಪರೀಶಿಲಿಸಿ ಆಶ್ರಯ ಸಮೀತಿ ಮೂಲಕ ಫಲಾನುಭವಿಗಳನ್ನು ಆಯ್ಕೆ ಮಾಡುವ ಅವಶ್ಯಕತೆ ಇರುತ್ತಥದೆ.<br>ಈ ಮಧ್ಯ ಮಾನ್ಯ ಸರಕಾರದಿಂಧ ವಿವಿಧ ಕೋಳಚೆ ಪ್ರದೇಶದಗಳಲ್ಲಿರುವ 300 ಗುಂಪು ಮನೆಗಳ ರಚಿಸಿಸಲು ಕರ್ನಾಟಕ ಕೊಳಚೆ ಅಭಿವೃದ್ಧಿ ಮಂಡಳ ಬೆಂಗಳೂರು ಇವರ ಆದೇಶ ಸಂಖ್ಯೆ: ಕೆಎಸ್‌ಡಿಬಿ/ಸಿಓಎಮ್‌ಎಮ್‌ಆರ್/ಟಿಡಿ-ಡಿಸಿ 140 2020-21 ದಿನಾಂಕ: 09-09-2021 ರನ್ವಯ ಕರ್ನಾಟಕ ಕೊಳಚೆ ಅಭಿವೃದ್ಧಿ ಮಂಡಳ ವಿಜಯಪುರ ಇವರ ಪತ್ರ ಸಂಖ್ಯೆ ನಂ: ಕಕೋನಿಮ/ಸಕಾನಿಯ/ವಿಉವಿ/ಜಾಗೆ ಹ 2022-23/156 ದಿನಾಂಕ: 23-05-2022ರಲ್ಲಿ 300 ಗುಂಪು ಮನೆಗಳ ನಿರ್ಮಾಣಕ್ಕಾಗಿ ಹಡಲಗೇರಿ ರಸ್ತೆಯ ಪುರಸಭೆ ವ್ಯಾಪ್ತಿಯ 12 ಎಕರೆ ಜಮೀನನ್ನು ಪರಿಶೀಲಿಸಿ ಹಸ್ತಾಂತರಿಸಲು ಪತ್ರ ಸಲ್ಲಿಸಿರುತ್ತಾರೆ.<br>ಕರ್ನಾಟಕ ಕೊಳಚೆ ಅಭಿವೃದ್ಧಿ ಮಂಡಳ ನಿಗಮದಿಂದ ಜಮೀನು ಹಸ್ತಾಂತರ ಕುರಿತು ಸಲ್ಲಿಸಿದ ಪತ್ರಕ್ಕೆ ಪುರಸಭೆಯಿಂದ ಯಾವುದೇ ತರಹದ ಕ್ರಮ ಕೈಕೊಂಡಿರುವದಿಲ್ಲ ಎಂದು ಪರಿಶಿಲನೆ ವೇಳೆ ಕಂಡು ಬರುತ್ತದೆ.<br>**ಅನುಬಂಧ – 4 ಪುಟ ಸಂಖ್ಯೆ: 7೮ ರಿಂದ 116 ರವರಗೆ ಲಗತ್ತಿಸಲಾಗಿದೆ.** |

**ತನಿಖಾಧಿಕಾರಿಗಳು**

| | | |
|---|---|---|
| ಶ್ರಿ ಜಿ.ಕೆ ಕಲಬುರ್ಗಿ ಪ್ರ.ದ.ಸ<br>ಮಹಾನಗರಪಾಲಿಕೆ, ವಿಜಯಪುರ | ಶ್ರೀ ಆರ್.ಪಿ.ಜಾಧವ ವಲಯ ಆಯುಕ್ತರು<br>ಮಹಾನಗರಪಾಲಿಕೆ, ವಿಜಯಪುರ | ಶ್ರೀ ಅನೀಲಕುಮಾರ ಮುದ್ದಾ ಸ.ಕಾ.ಅಭಿಯಂತರರು<br>ಜಿಲ್ಲಾ ನಗರಾಭಿವೃದ್ಧಿಕೋಶ ವಿಜಯಪುರ |

## ಅನುಬಂಧ "4"

| ಆಕ್ಷೇಪಣೆ ಕ್ರ.ಸಂಖ್ಯೆ | ವಿಷಯ/ವಿವರ | ಪುಟ ಸಂಖ್ಯೆ |
|---|---|---|
| 5 | 1) ಮಾನ್ಯ ಸರಕಾರದಿಂದ ಆಶ್ರಯ ಸಮಿತಿ ರಚಿಸಿರುವ ಕುರಿತು ದಿನಾಂಕ: 10-05-2000 ಆದೇಶ ನಂ: ವಇ/42/HAM99/Bangalore | 75 ರಿಂದ 116 |
| | 2) ರಿ.ಸ.ನಂ 73 ರ ಪಹಣಿ ಪತ್ರಿಕೆ | |
| | 3) ದಿನಾಂಕ: 07-03-2018 ರಂದು ಜರುಗಿದ ಆಶ್ರಯ ಸಮಿತಿಯಲ್ಲಿ ಆಯ್ಕೆಯಾದ ಆಯ್ಕೆಮಾಡಿದ ಫಲಾನುಭವಿಗಳ ನಡುವಳಿ | |
| | 4) ಕರ್ನಾಟಕ ಕೊಳಚೆ ಅಭಿವೃದ್ಧಿ ಮಂಡಳಿ ಬೆಂಗಳೂರು ಇವರ ಪತ್ರ ಸಂಖ್ಯೆ: ಕೆಎಸ್‌ಡಿಬಿ ಸಿಓಎಮ್‌ಎಮ್‌ಆರ್ /ಟಿಡಿ-ಡಿಸಿ 40/2020-21/200 ದಿನಾಂಕ: 09-09-2021 | |
| | 5) ಕರ್ನಾಟಕ ಕೊಳಚೆ ಅಭಿವೃದ್ಧಿ ಮಂಡಳಿ ಇವರ ಪತ್ರ ಸಂಖ್ಯೆ: ಕಕೊನಿಮ/ಸಕಾಅನಿಅ/ವಿಉವಿ/ಜಾಗೆಹ/ 2022-23/156 ದಿನಾಂಕ: 23-02-2022 | |

| ಅ.ನಂ | ಆಕ್ಷೇಪಣೆ | ವಿಚಾರಣೆ |
|---|---|---|
| 6 | ವಸತಿ ಯೋಜನೆ ಅಯಡಿ ಫಲಾನುಭವಿಗಳ ಆಯ್ಕೆ ಕ್ರಮಬದ್ಧವಾಗಿಲ್ಲ ಆದ್ದರಿಂದ ಆ ಪಟ್ಟಿ ರದ್ದು ಪಡಿಸಬೇಕು. | ದಿನಾಂಕ: 07-03-2018 ರಂದು ಪಟ್ಟಣದಲ್ಲಿಯ ನಿವೇಶನ ರಹಿತ ಅರ್ಹ ಕುಟುಂಬಗಳಿಗೆ ಅರ್ಜಿ ಸಲ್ಲಿಸಲು ತಿಳಿಸಿ ಸಾರ್ವಜನಿಕರಿಂದ ಅರ್ಜಿ ಆಹ್ವಾನಿಸಲಾಗಿದೆ. ನಿಗಧಿತ ಅವಧಿಯೊಳಗೆ ಬಂದಂತಹ ಅರ್ಜಿಗಳನ್ನು ಮುಖ್ಯಾಧಿಕಾರಿಗಳು ಸಭೆಯ ಗಮನಕ್ಕೆ ತಂದು ಅರ್ಹ ವಸತಿ ರಹಿತ ಫಲಾನುಭವಿಗಳನ್ನು ಆಯ್ಕೆ ಮಾಡಲು ಸಭೆಯಲ್ಲಿ ಮಂಡಿಸಿದಂತೆ, ಆಶ್ರಯ ವಸತಿ ಫಲಾನುಭವಿಗಳ ಆಯ್ಕೆ ಕುರಿತು ಸನ್ 2021-22 ನೇ ಸಾಲಿಗೆ ಈಗಾಗಲೇ ಸರಕಾರ ನಿಗಧಿಪಡಿಸಿದ ಗುರಿಯಂತೆ, ದಿ: 27-06-2022 ರಂದು ನಡೆದ ಆಶ್ರಯ ಸಮಿತಿ ಸಭೆಯಲ್ಲಿ ಡಾ॥ ಬಿ.ಆರ್ ಅಂಬೇಡ್ಕರ್ ನಿವಾಸ ಯೋಜನೆ ಅಡಿಯಲ್ಲಿ ಪರಿಶಿಷ್ಟ ಜಾತಿ/ಪ.ಪಂಗಡ ಜನಾಂಗದವರಿಗೆ 18, ಮನೆಗಳು ನಗರ ವಾಜಪೇಯಿ ವಸತಿ ಯೊಜನೆ ಅಡಿ ಸಾಮಾನ್ಯ ವರ್ಗ ಮತ್ತು ಅಲ್ಪಸಂಖ್ಯಾತರ ಜನಾಂಗದವರಿಗೆ 57 ಹೀಗೆ ಒಟ್ಟು 75 ಫಲಾನುಭವಿಗಳನ್ನು ಆಯ್ಕೆ ಮಾಡಿ ಠರಾವು ಅಂಗೀಕರಿಸಿರುತ್ತಾರೆ.<br>ಅದರಂತೆ ಫಲಾನುಭವಿಗಳ ಯಾದಿಯಂತೆ 55 ಪಲಾನುಭವಿಗಳನ್ನು ಆರ್.ಜಿ.ಎಚ್.ಸಿ.ಎಲ್ ಬೆಂಗಳೂರು ಇವರ ವೆಬ್‌ಸ್ಯಟ್‌ನಲ್ಲಿ ಅಪ್‌ಲೋಡ್ ಮಾಡಿ ಫಾರಂ-7ಸಿ ಯಲ್ಲಿ ಜನರೇಟ್ ಮಾಡಿರುವಂತೆ ಮಾನ್ಯ ಜಿಲ್ಲಾಧಿಕಾರಿಗಳ ಮುಖಾಂತೆರ ಆರ್.ಜಿ.ಎಚ್.ಸಿ.ಎಲ್ ಬೆಂಗಳೂರು ಇವರಿಗೆ ಮಂಜೂರಾತಿಗೆ ಸಲ್ಲಿಸಿರುತ್ತಾರೆ.<br>**ಅನುಬಂಧ – 5 ಪುಟ ಸಂಖ್ಯೆ: 117 ರಿಂದ 144 ರವರಗೆ ಲಗತ್ತಿಸಲಾಗಿದೆ.** |

**ತನಿಖಾಧಿಕಾರಿಗಳು**

ಶ್ರಿ ಜಿ.ಕೆ ಕಲ[illegible] ಪ್ರ.ದ.ಸ
ಮಹಾನಗರಪಾಲಿಕೆ, ವಿಜಯಪುರ

ಶ್ರೀ ಆರ್.ಪಿ.ಜಾಧವ ವಲಯ ಆಯುಕ್ತರು
ಮಹಾನಗರಪಾಲಿಕೆ, ವಿಜಯಪುರ

ಶ್ರೀ ಅನೀಲಕುಮಾರ ಮುದ್ದಾ ಸ.ಕಾ.ಅಭಿಯಂತರರು
ಜಿಲ್ಲಾ ನಗರಾಭಿವೃದ್ಧಿಕೋಶ ವಿಜಯಪುರ

| ಅನುಬಂಧ "ರ" | | |
|---|---|---|
| ಆಕ್ಷೇಪಣೆ ಕ್ರ.ಸಂಖ್ಯೆ | ವಿಷಯ/ವಿವರ | ಪುಟ ಸಂಖ್ಯೆ |
| 6 | 1) ಮಾನ್ಯ ಜಿಲ್ಲಾಧಿಕಾರಿಗಳು ವಿಜಯಪುರ ಇವರ ಪತ್ರ ಕ್ರಮ ಸಂಖ್ಯೆ/ ಜಿನಕೋ/ವಸತಿ/ಗುರಿ/ವಾಜಪೇಯಿ/ ಡಾ॥ಅಂಬೇಡ್ಕರ್/2021-22 ದಿ:31-01-2022ರಲ್ಲಿ ಗುರಿ ನಿಗದಿ ಪಡಿಸಿದ ಪತ್ರದ ನಕಲು. | 117 ರಿಂದ 144 |
| | 2) ದಿನಾಂಕ 10-02-2022 ರಂದು ಉದಯವಾಣಿ ದಿನಪತ್ರಿಕೆಯಲ್ಲಿ ನಿಗಧಿ ಪಡಿಸಿದ ಗುರಿಯಂತೆ ಫಲಾನುಭವಿಗಳ ಅರ್ಜಿ ಅಹ್ವಾನಿಸಿದ ಸಾರ್ವಜನಿಕ ಪ್ರಕಟಿಸಿ ಪ್ರಚುರ ಪಡಿಸಿದ ಪತ್ರಕೆಯ ಪ್ರತಿ. | |
| | 3) ಆಶ್ರಯ ಸಮಿತಿ ಸಭೆ ಕರೆದ ಅಜೆಂಡಾ ಪ್ರತಿರಿಯಲ್ಲಿ ಸಮಿತಿ ಸದಸ್ಯರ ರುಜು ಪಡೆದ ಪ್ರತಿ (ನಕಲು). | |
| | 4) ದಿನ ಪತ್ರಿಕೆಯಲ್ಲಿ ಪ್ರಚುರ ಪಡಿಸಿದಂತೆ ಮನೆಗಳಗಾಗಿ ಕಾರ್ಯಾಗಳಲ್ಲಿ ಸ್ವೀಕೃತವಾದ ಅರ್ಜಿಗಳ ಧೃಢಕರಿಸಿದ ಪ್ರತಿ | |
| | 5) ದಿನಾಂಕ 27-06-2022 ರಂದು ಜರುಗಿದ ಆಶ್ರಯ ಸಮಿತಿ ಸಭೆಯ ನಡುವಳಿಯ ನಕಲು ಪ್ರತಿ | |
| | 6) ರಾಜೀವ ಗಾಂಧಿ ಹೌಸಿಂಗ ಕಾರ್ಪೋರೇಶನ್ ಅಮಿಟೆಡ್ ಪೋರ್ಟಲ್ ಯುಬಿ ನಲ್ಲಿ 75 ಮನೆಗಳಿಗೆ 55 ಮನೆ ಎಂಟ್ರೀಸ್ ಮಾಡಿ ನೀಡಿದ ಅನುಮೋದನೆಗಾಗಿ ನೀಡಲಾಗಿದೆ | |

ಅ.ನಂ ಆಕ್ಷೇಪಣೆ ವಿಚಾರಣೆ

7

ಮಳಿಗೆಗಳ ಹರಾಜು ಪ್ರಕ್ರಿಯೆಯಲ್ಲಿ ತುಂಬಾ ದೋಷಗಲು ಇದ್ದು ಅವುಗಳನ್ನು ರದ್ದು ಮಾಡಿ ದಿ: 23-06-2022 ಸಾಮಾನ್ಯ ಸಭೆಯಲ್ಲಿ ಚರ್ಚಿಸಿದಂತೆ ಅವುಗಳ ಹರಾಜು ಇ-ಆಕ್ಷೇನ ಮೂಲಕ ಆಗಬೇಕು.

ಮುದ್ದೇಬಿಹಾಳ ಪುರಸಭೆ ವ್ಯಾಪ್ತಿಯಲ್ಲಿ ಈ ಕೆಳಕಂಡ ಮಳಿಗೆಗಳು ಪುರಸಭೆಯಿಂದ ನಿರ್ಮಿಸಿದ್ದು ಇರುತ್ತವೆ.

| ಅ ನಂ | ಮಳಿಗೆಗಳ ಪ್ರಕಾರ | ಹರಾಜು ಮಾಡಬೇಕಾದ ಮಳಿಗೆಗಳು | ಹರಾಜು ಮಾಡಲಾದ ಮಳಿಗೆಗಳು |
|---|---|---|---|
| 1 | ತಂಗಡಗಿ ರಸ್ತೆ | 33 | 13 (08+05) |
| 2 | ಇಂದಿರಾ ಸರ್ಕಲ | 40 | 9(06+03) |
| 3 | ಇಂದಿರಾ ಸರ್ಕಲ ಹತ್ತಿರ ತಗಡಿನ ಮಳಿಗೆ | 05 | - |
| 4 | ಮಟನ್ ಮಾರ್ಕೆಟ | 14 | - |
| | ಒಟ್ಟು | 92 | 22 |

- ಮೇಲ್ಕಾಣಿಸಿದ ಮಳಿಗೆಗಳಲ್ಲಿ 92 ಮಳಿಗೆಗಳನ್ನು ಮಾನ್ಯ ಘನಸರ್ಕಾರದ ಆದೇಶ ಸಂಖ್ಯೆ:ನಅಇ301 ಜಿಇಎಲ್ 2017 ಬೆಂಗಳೂರು ದಿನಾಂಕ: 19-07-2019 ರನ್ವಯ ಮುದ್ರಾಂಕ ಶುಲ್ಕದ ಕಾಯ್ದೆ 1957 (45ಬಿ) ರನ್ವಯ ನಿಗಧಿಪಡಿಸಿದ ಮಾರುಕಟ್ಟೆ ಬೆಲೆಯನ್ನು ಆಧರಿಸಿ ನಿಗಧಿ ಪಡಿಸಿದ ಠೇವಣಿ ಮತ್ತು ಬಾಡಿಗೆ ಮೊತ್ತವನ್ನು ನಿಗಧಿಪಡಿಸಿ ಠರಾವು ನಂ: 209 ದಿ: 04-06-2020 ರಲ್ಲಿ ನಿರ್ಣಯ ಅಂಗೀಕರಿಸಿ, ದಿ: 24-06-2020 ರಂದು ಮಾನ್ಯ ಜಿಲ್ಲಾಧಿಕಾರಿಗಳು ವಿಜಯಪುರ ಇವರಿಗೆ ದರ ಮಂಜೂರಿಸುವ ಕುರಿತು ಹಾಗೂ ಹರಾಜು ಮಾಡುವ ಪ್ರಕ್ರಿಯೆಗೆ ಮಂಜೂರಾತಿಗಾಗಿ ಸಲ್ಲಿಸಿದಂತೆ, ಮಾನ್ಯರವರು ನೀಡಿದ ಆದೇಶ ಸಂ.ಕ್ರ.ಜಿನಕೋ-3/ ಮಳಿಗೆ ಅಲಾವು/ ಸಿಆರ್/ 2020-21/ 254 ದಿನಾಂಕ:24-12-2020 ರ ಪ್ರಕಾರ ಶೇ 100% ಕ್ಕೆ ಠೇವಣಿ & ಬಾಡಿಗೆ ದರಕ್ಕೆ ಮಂಜೂರಾತಿ ಪಡೆಯಲಾಗಿದೆ.

- ಮಳಿಗೆಗಳ ಹರಾಜು ಕುರಿತು ಸಾರ್ವಜನಿಕರಿಗೆ ಪ್ರಕಟಣೆ ಮೂಲಕ ತಿಳಿಸಿ ಕ್ರ.ಸಂ./ಪುಸಮು/ಕಂದಾಯ ಅಲಾವು/ 2021-22/ ದಿನಾಂಕ:28-31-2022 ರ ಪ್ರಕಾರ ಪ್ರಕಟಣೆ ಮಾಡಲಾಗಿದೆ.
- ಇಲ್ಲಿಯವರೆಗೆ ಮೇಲಿನ ಅನುಭಂದದಲ್ಲಿ ಕಾಣಿಸಿರುವಂತೆ ಒಟ್ಟು 22 ಮಳಿಗೆಗಳನ್ನು ಹರಾಜು ಮಾಡಲಾಗಿದೆ.
- ದಿನಾಂಕ:28-03-2022 ರಂದು ಕರೆದ ಹರಾಜು ಪ್ರಕ್ರಿಯೆಯನ್ನು ಕಾರಣಾಂತರಗಳಿಂದ ಮೂಂದೂಡಿದ ನಂತರ 19-04-2022ಕ್ಕೆ ನಿಗಧಿ ಪಡಿಸಿದಂತೆ ತಂಗಡಗಿ ರಸ್ತೆಯ 08, ಇಂದಿರಾ ಸರ್ಕಲ 06 ಒಟ್ಟು 14 ಮಳಿಗಳ ಹರಾಜು ಕುರಿತು ಕೆಲವು ಮಳಿಗೆದಾರರು ಓ.ಎಸ್ ನಂ01/2022 ಪ್ರಕಾರ Additional dist sessions judges vijaypur ವಿಜಯಪುರದಲ್ಲಿ ದಾವೆ ಹೂಡಲಾಗಿ ನ್ಯಾಯಾಲವು ಸದರಿ ದಾವೆಯನ್ನು Dismiss ಮಾಡಿದ್ದು ಇರುತ್ತದೆ. ನಂತರ 2ನೇ ಬಾರಿ 12-07-2022ರಂದು ಹರಾಜು ಪ್ರಕ್ರಿಯೆ ಕೈಗೊಳಲಾಗಿದಂತೆ ಈ ಸಂಧರ್ಬದಲ್ಲಿ ತಂಗಡಗಿ ರಸ್ತೆ 05 ಮತ್ತು ಇಂದಿರಾ ಸರ್ಕಲ 03 ಒಟ್ಟು 08 ಮಳಿಗೆ ಹರಾಜು ಮೂಲಕ ನೀಡಲಾಗಿದೆ.
- ಈ ನಡುವೆ ಮಳಿಗೆಗಳ ಹರಾಜು ಪ್ರಕ್ರಿಯೆಯಲ್ಲಿ Right of Refusal ರಂತೆ ಶೇ5% ರಷ್ಟು ಹೆಚ್ಚಿನ ಬಾಡಿಗೆ ನಿಗಧಿಪಡಿಸಿ ಅವಕಾಶ ಕಲ್ಪಿಸಿಕೊಡುವ ಕುರಿತು 16 ಮಳಿಗೆದಾರರು ದಿನಾಂಕ:22-07-2022 ರಂದು ಅರ್ಜಿ ಸಲ್ಲಿಸಿ ಹರಾಜು ಕಾಲಕ್ಕೆ ಮೇಲ್ಕಾಣಿಸಿದ ಸರ್ಕಾರದ ಆದೇಶ 2019ರಲ್ಲಿ ತಿಳಿಸಿರುತವಂತೆ Right of Refusal ಬಗ್ಗೆ ಮಳಿಗೆದಾರರಿಗೆ ಮುಂಚಿತವಾಗಿ ತಿಳಿಸಿರುವುದಿಲ್ಲ. ಅದು ಅಲ್ಲದೆ ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡುವಾಗ ಸಹ ತಿಳಿಸಿರುವುದಿಲ್ಲ. ನಮ್ಮ ಅಂಗಡಿಕಾರರ ಗಮನಕ್ಕೆ ತಂದಿರುವುದಿಲ್ಲ ಎಂದು ಲಿಖಿತವಾಗಿ ತಿಳಿಸಿ ತುಂಬಾ ದೋಷಗಳನ್ನು ಇರುವದರಿಂದ ಕೂಡಲೇ ಹರಾಜನ್ನು ಕೈಬಿಡಬೇಕು. ಹಾಗೂ Right of first Refusal ಗೆ ಅವಕಾಶ ಮಾಡಿಕೊಟ್ಟದ್ದಲ್ಲಿ

ಅನುಕೂಲವಾಗುವದೆಂದು ತಿಳಿಸಿರುತ್ತಾರೆ. ಸದರಿ ಅರ್ಜಿಯನ್ನು ಪುರಸಭೆಗೆ ನೀಡಿದ್ದು, ಪುರಸಭೆಯ ಆವಕ ವಿಭಾಗದಿಂದ ಸ್ವೀಕೃತವಾಗಿರುವದಿಲ್ಲ.

- ಇನ್ನುಳಿದ ಮಳಿಗೆಗಳನ್ನು ಹರಾಜು ಪ್ರಕ್ರಿಯೆ ಹಂತದಲ್ಲಿದ್ದು ದಿನಾಂಕ: 04-08-2022 ರ ವರೆಗೆ ಪ್ರಕ್ರಿಯೆ ಇರುತ್ತದೆ.
- ಮೇಲಿನ ಒಟ್ಟು 22 ಮಳಿಗೆಗಳ ಮೊದಲನೆ ಹಂತದಲ್ಲಿ 14 ಮಳಿಗೆಗಳನ್ನು ಮತ್ತು ಎರಡನೇ ಹಂತದಲ್ಲಿ 8 ಮಳಿಗೆಗಳನ್ನು ಹರಾಜು ಮಾಡಲಾಗಿದೆ.
- ಸದರಿ ಲಿಲಾವು ಪ್ರಕ್ರಿಯೆಗೆ ಮಾನ್ಯ ಸರ್ಕಾರದ ಸುತ್ತೋಲೆ ಸಂಖ್ಯೆ:ನಅಇ301 ಜಿಇಎಲ್ 2017 ಬೆಂಗಳೂರು ದಿನಾಂಕ: 19-07-2019 ರ VI(e&f) ರಲ್ಲಿ ವಿಧಿಸಿದರುವ ಷರತ್ತುಗಳಂತೆ ಮಾನ್ಯ ಜಿಲ್ಲಾಧಿಕಾರಿಗಳು ವಿಜಯಪುರ ಇವರ ಪೂರ್ವಾನುಮತಿ ಪಡೆಯದೇ ಹರಾಜು ಹಂಚಿಕೆ ಕಾರ್ಯವನ್ನು ಕೈಗೊಂಡಿರುತ್ತಾರೆ.
- ಮೇಲ್ಕಾಣಿಸಿದ ಸುತ್ತೋಲೆಯ ಷರತ್ತುಗಳನ್ನು ಉಲ್ಲಂಘಿಸಿ ಮಂಜೂರಾತಿ ಇಲ್ಲದೆ 14 ಮಳಿಗೆಗಳನ್ನುನ ಬಾಡಿಗೆದಾರರಿಗೆ ನೊಂದಣಿ ಕಛೇರಿಯಲ್ಲಿ ನೋಂದಾಯಿಸಿ ಕೊಟ್ಟಿರುತ್ತಾರೆ.

ಮುದ್ದೇಬಿಹಾಳ ಪುರಸಭೆ ವ್ಯಾಪ್ತಿಯಲ್ಲಿ ಈ ಕೆಳಕಂಡ ಮಳಿಗೆಗಳು ಪುರಸಭೆಯಿಂದ ನಿರ್ಮಿಸಿದ್ದು ಇರುತ್ತವೆ.

**ನಗರೋತ್ಥಾನ 4ರ ಅಭಿವೃದ್ಧಿ ಯೋಜನೆಯಲ್ಲಿ ನಿರ್ಮಿಸಿದ ಮಳಿಗೆಗಳು.**

| ಅ ನಂ | ಮಳಿಗೆಗಳ ಪ್ರಕಾರ | ಒಟ್ಟು ಮಳಿಗೆಗಳ | ಮಳಿಗೆಗಳು |
|---|---|---|---|
| 1 | ಹಳೆ ತಹಸಿಲ್ದಾರ ಹತ್ತಿರ | 39 | 34 |

- ಮೇಲ್ಕಾಣಿಸಿದ ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಅಭಿವೃದ್ಧಿ ಯೋಜನೆಯಲ್ಲಿ ನಿರ್ಮಿಸಿದ ಮಳಿಗೆಗಳಲ್ಲಿ 39 ಮಳಿಗೆಗಳನ್ನು ಮಾನ್ಯ ಘನಸರ್ಕಾರದ ಆದೇಶ ಸಂಖ್ಯೆ:ನಅಇ301 ಜಿಇಎಲ್ 2017 ಬೆಂಗಳೂರು ದಿನಾಂಕ: 19-07-2019 ರನ್ವಯ ಮುದ್ರಾಂಕ ಶುಲ್ಕದ ಕಾಯ್ದೆ 1957 (45ಬಿ) ರನ್ವಯ ನಿಗದಿಪಡಿಸಿದ ಮಾರುಕಟ್ಟೆ ಬೆಲೆಯನ್ನು ಆಧರಿಸಿ ನಿಗಧಿ ಪಡಿಸಿದ ಠೇವಣಿ ಮತ್ತು ಬಾಡಿಗೆ ಮೊತ್ತವನ್ನು ನಿಗಧಿಪಡಿಸಿ ಠರಾವು ನಂ: 37 ದಿ: 16-02-2021 ರಲ್ಲಿ ನಿರ್ಣಯ ಅಂಗೀಕರಿಸಿ, ಮಂಜೂರಾತಿಗಾಗಿ ಸಲ್ಲಿಸಿದ ಪ್ರಸ್ತಾವನೆಗೆ ಮಾನ್ಯ ಜಿಲ್ಲಾಧಿಕಾರಿಗಳು ವಿಜಯಪುರ ಇವರು ನೀಡಿದ ಆದೇಶ ಸಂ.ಕ್ರ.ಜಿನಕೋ-3/ ಮಳಿಗೆ ಲಿಲಾವು/ ಸಿಆರ್/ 2021-22/ 140 ದಿನಾಂಕ: 27-12-2021 ರ ಪ್ರಕಾರ ಶೇ 100% ಕ್ಕೆ ಠೇವಣಿ & ಬಾಡಿಗೆ ದರಕ್ಕೆ ಮಂಜೂರಾತಿ ಪಡೆಯಲಾಗಿದೆ.
- ಮಳಿಗೆಗಳ ಹರಾಜು ಕುರಿತು ಸಾರ್ವಜನಿಕರಿಗೆ ಪ್ರಕಟಣೆ ಮೂಲಕ ತಿಳಿಸಿ ಕ್ರ.ಸಂ./ಮುಸಮು/ಕಂದಾಯ ಲಿಲಾವು/ 2021-22/ ದಿ: 28-03-2022 ರ ಪ್ರಕಾರ ಪ್ರಕಟಣೆ ಪ್ರಕಟಿಲಾಗಿದೆ.
- ಮೇಲಿನ ಅನುಭಂಧದಲ್ಲಿ ಕಾಣಿಸಿರುವಂತೆ ಒಟ್ಟು 34 ಮಳಿಗೆಗಳನ್ನು ಹರಾಜು ಮೂಲಕ ವಿಲೇಯ ಮಾಡಲು ದಿನಾಂಕ: 18-04-2022 ಹರಾಜು ಪ್ರಕ್ರೀಯೆ ಜರುಗಿಸಲಾಗಿ ಯಾವುದೇ ಬಿಡ್‌ದಾರರು ಭಾಗವಹಿಸದೇ ಇರುವದರಿಂಧ ಸದರಿ ಹರಾಜು ಪ್ರಕ್ರಿಯೆಯನ್ನು ದಿನಾಂಕ: 06-08-2022 ರಂದು ನಿಗಧಿಪಡಿಸಿ ಪುನಃ ಹರಾಜು ಕರೆಯಲಾಗಿ ಸದರಿ ಹರಾಜಿನಲ್ಲಿ ಸಹ ಬಿಡ್‌ದಾರರು ಭಾಗವಹಿಸಿರುವುದಿಲ್ಲ. ಸದರಿ ಮಳಿಗೆಗಳು ಹರಾಜು ಪ್ರಕ್ರಿಯೆ ಹಂತದಲ್ಲಿರುತ್ತವೆ.

ಮೇಲ್ಕಾಣಿಸಿದ 39 ಮಳಿಗೆಗಳ ಪೈಕಿ 5 ಮಳಿಗೆಗಳು ಮಾನ್ಯ ಸರಕಾರದ ಆದೇಶದಲ್ಲಿ ತಿಳಿಸಿರುವಂತೆ ಠೇವಣಿ ಮತ್ತು ಬಾಡಿಗೆ ಹಣ ನಿಗಧಿ ಪಡಿಸಿ ಮಾನ್ಯ ಜಿಲ್ಲಾಧಿಕಾರಿಗಳಿಂದ ಅನುಮತಿ ಪಡೆಯದೇ ದಿ: 23-11-2018 ರಂದು ಹರಾಜು ಮಾಡಿರುತ್ತಾರೆ. ಸದರಿ ಮಳಿಗೆಗಳನ್ನು ಬಾಡಿಗೆದಾರರಿಗೆ ಸರ್ಕಾರದ ಸುತ್ತೋಲೆಯಂತೆ ಮಾನ್ಯ ಜಿಲ್ಲಾಧಿಕಾರಿಗಳಿಂದ ಅನುಮೋದನೆ ಪಡೆಯದೇ ಠೇವಣಿ ಮತ್ತು ಬಾಡಿಗೆ

ಹಣಕ್ಕೆ ಹರಾಜು ಮಾಡಿ ವಿಲೆ ಮಾಡಿರುತ್ತಾರೆ. ನಂತರ ಘಟನೋತ್ತರ ಮಂಜೂರಿಗಾಗಿ ದಿ:06-08-2021 ರಂದು ಮಾನ್ಯ ಜಿಲ್ಲಾಧಿಕಾರಿಗಳು' ವಿಜಯಪುರ ಇವರ ಕಾರ್ಯಾಲಯಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದಕ್ಕೆ ಮಾನ್ಯರ ಕಾರ್ಯಾಲಯದ ಆದೇಶ ಸಂಖ್ಯೆ: ಕ್ರ.ಸಂ.ಜಿನಕೋ/2/ಮಳಗೆ/ ಮಂಜೂರಾತಿ/2020-21 ದಿನಾಂಕ: 08-04-2021 ರಂದು ಠೇವಣಿ ಮತ್ತು ಬಾಡಿಗೆ ಮೊತ್ತಕ್ಕೆ ಮಾತ್ರ ಘಟನೋತ್ತಾರ ಮಂಜೂರಾತಿ ನೀಡಿರುತ್ತಾರೆ. ಮಳಗೆಗಳ ಹಂಚಿಕೆಗೆ ಮಂಜೂರಾತಿ ನೀಡದೇ ಇರುವದರಿಂದ ಪುನಃ ಮಂಜೂರಾತಿಗಾಗಿ ಪ್ರಸ್ತಾವನೆಯನ್ನು ದಿನಾಂಕ: 06-08-2021 ರಂದು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಇನ್ನೂಳಿದ 34 ಮಳಗೆಗಳ ಹರಾಜ ಪ್ರಕ್ರಿಯೆ ಜರುಗಿಸಿರುವದಿಲ್ಲ.

ಅನುಬಂಧ – 6 ಪುಟ ಸಂಖ್ಯೆ: 145 ರಿಂದ 280 ರವರಗೆ ಲಗತ್ತಿಸಲಾಗಿದೆ.

**ತನಿಖಾಧಿಕಾರಿಗಳು**

| | | |
|---|---|---|
| ಶ್ರಿ ಜಿ.ಕೆ ಕಲಬುರ್ಗಿ ಪ್ರ.ದ.ಸ<br>ಮಹಾನಗರಪಾಲಿಕೆ, ವಿಜಯಪುರ | ಶ್ರೀ ಆರ್.ಪಿ.ಜಾಧವ ವಲಯ ಆಯುಕ್ತರು<br>ಮಹಾನಗರಪಾಲಿಕೆ, ವಿಜಯಪುರ | ಶ್ರೀ ಅನೀಲಕುಮಾರ ಮುದ್ದಾ ಸ.ಕಾ.ಅಭಿಯಂತರರು<br>ಜಿಲ್ಲಾ ನಗರಾಭಿವೃದ್ಧಿಕೋಶ ವಿಜಯಪುರ |

## ಅನುಬಂಧ "6"

| ಆಕ್ಷೇಪಣೆ ಕ್ರ.ಸಂಖ್ಯೆ | ವಿಷಯ/ವಿವರ | ಪುಟ ಸಂಖ್ಯೆ |
|---|---|---|
| 7 | 1) ಮಾನ್ಯ ಸರಕಾರದ ಸುತ್ತೋಲೆ ದಿನಂಕ: 26-06-2009, 14-08-2015 ಮತ್ತು 19-07-2019 | 145 ರಿಂದ 280 |
| | 2) ಅಂಗಡಿಗಳ ಅಲಾವು ಕರೆಯುವ ಕುರಿತು ಸರಕಾರದ ಸುತ್ತೋಲೆ ಠೇವಣಿ ಮತ್ತು ಸುತ್ತೋಲೆಗಳಂತೆ ಠೇವಣಿ ಮತ್ತು ಅಂಗಡಿ ಬಾಡಿಗೆ ನಿಗಧಿ ಪಡಿಸಿ ಅಂಗಡಿ ಹರಾಜು ಮಾಡುವ ಕುರಿತು ದಿ: 04-06-2020 ರಂದು ಜರುಗಿದ ಸಾಮಾನ್ಯ ಸಭೆಯ ಠರಾವು ನಂ: 209 ರ ನಕಲು ಪ್ರತಿ. | |
| | 3) ಮಾನ್ಯ ಜಿಲ್ಲಾಧಿಕಾರಿಗಳು ವಿಜಯಪುರ ಇವರಿಗೆ ಠೇವಣಿ ಬಾಡಿಗೆ ದರ ಮಂಜೂರಾತಿಗಳಗಾಗಿ ಸಲ್ಲಿಸಿದ ಪ್ರಸ್ತಾವನೆ ದಿನಾಂಕ: 04-06-2020, 24-06-2020 ಮತ್ತು 23-01-2020 | |
| | 4) ಮಾನ್ಯ ಜಿಲ್ಲಾಧಿಕಾರಿಗಳು ದರ ಮಂಜೂರಾತಿ ನೀಡಿದ ಆದೇಶ ಸಂ.ಕ್ರಸಂ ಜಿನಕೋ/3ಮಳಗೆ ಅಲಾವು/ ಸಿಆರ್- /2020-21/254 ದಿ: 24-12-2020 ರ ನಕಲು ಪ್ರತಿ. | |
| | 5) ಆದೇಶದಂತೆ ಅಂಗಡಿಗಳ ಹರಾಜು ಪ್ರಕಟಣೆ ದಿನಾಂಕ: 28-03-2022 ಮತ್ತು 12-07-2022 ರಂದು ಅಲಾವಿನ ದಿನಾಂಕ ಪ್ರಚುರ ಪಡಿಸಲಾಗಿದೆ. ದಿನಾಂಕ: 21-07-2022 ರಿಂದ 04-08-2022 ರ ವರೆಗೆ ಅಲಾವು ಜರುಗಿಸಲಾಗಿದೆ. | |
| | 6) ಹಳೆಯ ಮಳಿಗೆದಾರರು ರೈಟ್ ಆಫ್ ರೆಫ್ಯೂಜಲ್ ರಂತೆ ಶೇ 5% ರಂತೆ ಬಾಡಿಗೆ ಹೆಚ್ಚಿಸಿ ಅವಕಾಶ ಕಲ್ಪಿಸುವ ಕುರಿತು ಅರ್ಜಿ ನಕಲು. | |

| ಅ.ನಂ | ಆಕ್ಷೇಪಣೆ | ವಿಚಾರಣೆ |
|---|---|---|
| 8 | 2018ರಲ್ಲಿ ಕಾನೂನು ಬಾಹೀರ ಸಾರ್ವಜನಿಕ ಜಾಗೆಗಳನ್ನು ಎರಡು ಸಂಸ್ಥೆಗಳಿಗೆ ನೋಂದ ಮಾಡಿದ ಅಧಿಕಾರಿ ಮೇಲೆ ಕ್ರಮ ಕೈಗೊಳ್ಳಬೇಕು. | 1) ಮಾನ್ಯ ಶ್ರೀ ಸಿ.ಎಸ್ ನಾಡಗೌಡ ಸರ್ಕಾರದ ವಿಶೇಷ ಪ್ರತಿನಿಧಿ ಇವರು ಅಧ್ಯಕ್ಷರು ಪುರಸಭೆ ಮುದ್ದೇಬಿಹಾಳ ಇವರು ಜೈನ ಸಮುದಾಯ ವರ್ಗದ ಜನರು ಹೆಚ್ಚಾಗಿ ವಾಸಿಸುತ್ತಿರುವದರಿಂದ ಧಾರ್ಮಿಕ ಚಟುವಟಿಕೆಗಳಿಗಾಗಿ ಜೈನ ದೇವಾಲಯವನ್ನು ನಿರ್ಮಾಣ ಮಾಡಲು ಗೃಹ ಮಂಡಳಿ ಬಿಜಾಪುರ ಇವರಿಂದ ಪುರಸಭೆಗೆ ಹಸ್ತಾಂತರಿಸಿರುವ ಎಸ್‌ಟಿಪಿ ಪ್ಲಾಂಟ್ ಹತ್ತಿರದ ಯುಟಿಲಿಟಿಜ್ & ಸರ್ವಿಸ್‌ಗಳಿಗೆ ಮೀಸಲಿರಿಸಿರುವ 1342.95 ಚ.ಮೀ ಜಾಗವು ಖಾಲಿ ಇದ್ದು, ಸದರಿ ಜಾಗೆಯನ್ನು ವಾಸು ಜೈನ ಪೂಜ್ಯ ಸಂಘ (ರಿ) ಮುದ್ದೇಬಿಹಾಳ ಇವರಿಗೆ ಮಂಜೂರಿಸುವ ಕುರಿತು ಆಡಳಿತಾತ್ಮಕ ಮಂಜೂರಾತಿಗಾಗಿ ಸರ್ಕಾರಕ್ಕೆ ಪ್ರಸ್ತಾವನೆ ಕುರಿತು ಸಲ್ಲಿಸುವ ಪತ್ರವನ್ನು ನೀಡಿರುತ್ತಾರೆ.<br>2) ಪುರಸಭೆ ಮುದ್ದೇಬಿಹಾಳ ಕಾರ್ಯಾಲಯದ ಸಾರ್ವಜನಿಕ ಪ್ರಕಟಣೆಯಲ್ಲಿ ದಿ: 05-10-2016 ರಂದು ಕೈಗೊಂಡ ನಿರ್ಣಯದಂತೆ ದಿ: 28-11-2016 ರಂದು ಪ್ರಕಟಣೆ ಪ್ರಕಟಿಸಿದ್ದು ಅದರಲ್ಲಿ ಪ್ರಕಟಣೆ ಹೊರಡಿಸಿದ ದಿ: 26-12-2016 ಒಳಗೆ ಅಗತ್ಯ ದಾಖಲಾತಿಗಳೊಂದಿಗೆ ಆಕ್ಷೇಪಣೆ/ಸಲಹೆ ಸೂಚನೆ ಸಲ್ಲಿಸಲು ತಿಳಿಸಿರುತ್ತಾರೆ. ಸದರಿ ಪ್ರಕಟಣೆಯು ಕನ್ನಡ ಪ್ರಭ ದಿನ ಪತ್ರಿಕೆಯಲ್ಲಿ ದಿನಾಂಕ:09-12-2016 ರ ಹುಬ್ಬಳ್ಳಿ/ ಶಿವಮೊಗ್ಗ/ ಮಂಗಳೂರು ಆವೃತಿಯಲ್ಲಿ ಸಾರ್ವಜನಿಕರಿಂದ ಆಕ್ಷೇಪಣೆ ಕೋರಿ ಪ್ರಕಟಣೆ ಪ್ರಕಟಿಸಿರುತ್ತಾರೆ.<br>3) ಸದರಿ ಜಾಗೆಯು ಜೈನ ಶ್ವೇತಾಂಭರ ಸಮಾಜ ಅತ್ಯಂತ ಶ್ರೀಮಂತ ಸಮಾಜವಾಗಿದ್ದು ಈಗಾಗಲೇ ಬೇರೆ ಕಡೆಗೆ ಬಸ್ ನಿಲ್ದಾಣದ ಹತ್ತಿರ ಸಿ.ಟಿ.ಎಸ್ ನಂ 2097 ರ ಸ್ವಂತ ನಿವೇಶನ ಹೊಂದಿದ್ದು ಅಲ್ಲಿ ಕಟ್ಟಡ ಕಟ್ಟಬಹುದಾಗಿದೆ. ಮತ್ತು ಪಟ್ಟಣ ವ್ಯಾಪ್ತಿಯ ಹೊರಗಡೆ ಕೊಟ್ಟರೆ ಜ್ಞಾನ ಮಂದಿರಕ್ಕೆ ಅನುಕೂಲವಾಗುವುದೆಂದು ತಿಳಿಸಿ ಸದರಿ ಜಾಗೆಯು ಮೇಲ್ಕಾಣಿಸಿದ ಸಂಘಕ್ಕೆ |

ನೀಡಬಾರದಾಗಿ ಶ್ರೀ ಬಲಭೀಮ ನಾಯಕ ಮಕ್ಕಳ ಹಾಗೂ ದಲಿತ ಮುಖಂಡರುಗಳು ಇವರು ಆಕ್ಷೇಪಣೆಯನ್ನು ಹಾಗೂ ಮಾನ್ಯ ಜಿಲ್ಲಾಧಿಕಾರಿಗಳು ವಿಜಯಪುರ ರವರ ಕಛೇರಿಗೂ ಆಕ್ಷೇಪಣೆ ಸಲ್ಲಿಸಿರುತ್ತಾರೆ. ಮಾನ್ಯ ಜಿಲ್ಲಾಧಿಕಾರಿಗಳು ವಿಜಯಪುರ ಇವರ ಪರವಾಗಿ ಸದರಿ ಆಕ್ಷೇಪಣೆಯನ್ನು ನಿಯಮಾನುಸಾರ ಪರಿಶೀಲಿಸಿ ಅಗತ್ಯ ಕ್ರಮಕೈಗೊಂಡು ಕ್ರಮದ ಬಗ್ಗೆ ಅರ್ಜಿದಾರರಿಗೆ ಹಿಂಬರಹ ನೀಡಲು ದಿ:18-03-2017 ರಂದು ಮುದ್ದೇಬಿಹಾಳ ಇವರಿಗೆ ಸೂಚಿಸಿರುತ್ತಾರೆ.

4) ಪುರಸಭೆ ಕಾರ್ಯಾಲಯದ ಪತ್ರ ಸಂಖ್ಯೆ: ಪು.ಸ.ಮು/ ಬಿನ್‌ಶೇತ್ಕಿ/ ನಿವೇಶನ.ಮ. 2016-17 ದಿ: 28-02-2017 ಸಿಟಿಎಸ್ ನಂ 85/2 ರಲ್ಲಿ ಖುಲ್ಲಾ ಜಾಗೆಯನ್ನು ಸದರಿ ಸಮಾಜಕ್ಕೆ ಜ್ಞಾನ ಮಂದಿರ & ಸಮುದಾಯ ಭವನ ಕಟ್ಟಡ ನಿರ್ಮಾಣಕ್ಕೆ ಕುರಿತು ಪ್ರಸ್ತಾವನೆ ಸಲ್ಲಿಸಿದ್ದು, ಯೋಜನಾ ನಿರ್ದೇಶಕರು ಜಿಲ್ಲಾ ನಗರಾಭಿವೃದ್ಧಿಕೋಶ ವಿಜಯಪುರ ಇವರು ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಅ.ನಂ 01 ರಿಂದ 11 ವರೆಗಿನ ನ್ಯೂನತೆಗಳನ್ನು ಕಂಡು ಬಂದಿದಕ್ಕೆ ಅವುಗಳನ್ನು ಸರಿ ಪಡಿಸಿ ಮರು ಪ್ರಸ್ತಾವನೆಯನ್ನು ಸಲ್ಲಿಸಲು ಬಂದ ಮೂಲ ಪ್ರಸ್ತಾವನೆಯನ್ನು ಪತ್ರದೊಂದಿಗೆ ಲಗತ್ತಿಟ್ಟು ಮರಳಿ ಕಳುಹಿಸಿರುತ್ತಾರೆ. (ಪತ್ರ ಸಂ.ಕ್ರ.ಜಿನಕೋ-1/ಸಿಬ್ಬಂದಿ ಸಿಆರ್/2017-18 ದಿನಾಂಕ: -05-2017) ಪುರಸಭೆಯಲ್ಲಿ ಪತ್ರ ಸ್ವೀಕೃತ ದಿನಾಂಕ: 22-05-2017.

5) ಪುರಸಭೆ ಕಾರ್ಯಾಲಯದ ಪತ್ರ ಸಂಖ್ಯೆ: ಪುಸಮು/ಬಿನ್‌ಶೆ/ಕ/ನಿವೇಶನ ಮು/ 2017-18/158 ದಿನಾಂಕ: 19-06-2017 ರನ್ನು ಯೋಜನಾ ನಿರ್ದೇಶಕರು ಜಿಲ್ಲಾ ನಗರಾಭಿವೃದ್ಧಿಕೋಶ ವಿಜಯಪುರ ಇವರು ದಿ: 20-05-2017ರ ಪತ್ರದಲ್ಲಿ ತಿಳಿಸಿರುವ ನ್ಯೂನ್ಯತೆಯ ಅ.ಸಂ 02 ರಲ್ಲಿ ಸಂಘದ ಆರ್ಥಿಕ ಪರಿಸ್ಥಿತಿ ದಾಖಲಾತಿಗಳನ್ನು ಹೊರತು ಪಡಿಸಿ ಎಲ್ಲ ದಾಖಲಾತಿಗಳನ್ನು ಲಗತ್ತಿಸಿ ನಿವೇಶನ ಯುಟಿಲಿಟಿಜ್ & ಸರ್ವಿಸೆಸ್ ಉದ್ದೇಶಕ್ಕಾಗಿ ಮೀಸಲಿಟ್ಟ ನಿವೇಶನವನ್ನು ಮಂಜೂರಿಸಲು

ಮರು ಪ್ರಸ್ತಾವನೆಯನ್ನು ಯೋಜನಾ ನಿರ್ದೇಶಕರು ಜಿಲ್ಲಾ ನಗರಾಭಿವೃದ್ಧಿ ಕೋಶ ವಿಜಯಪುರ ರವರ ಕಾರ್ಯಾಲಕ್ಕೆ ಸಲ್ಲಿಸಿರುತ್ತಾರೆ.

8) ಮಾನ್ಯ ಜಿಲ್ಲಾಧಿಕಾರಿಗಳು ವಿಜಯಪುರ ಇವರ ಪತ್ರ ಸಂ: ಕ್ರ/ ಜಿನಕೋ/ ನಿವೇಶನ/ಸಿಆರ್ 2017-18 ದಿ: -12-2017 ರ ಪತ್ರದಲ್ಲಿ ಮುದ್ದೇಬಿಹಾಳ ಪುರಸಭೆಯವರು ದಿ: 19-06-2017 ರಂದು ಸಲ್ಲಿಸಿದ ಪ್ರಸ್ತಾವನೆಯನ್ನು ಮತ್ತು ಪರಿಶೀಲಿಸಿ ನಗರಾಭಿವೃದ್ಧಿ ಇಲಾಖೆ ಬೆಂಗಳೂರು ಇವರ ಅಧಿಸೂಚನೆ ನಂ UDD/27/TTP/2016 ಬೆಂಗಳೂರು ದಿ: 24/05/2017 Karnataka Planning Authorities (Allotment of Circle amenities sites) Rules 2016 Rule 3,5,6 & 14 ರಲ್ಲಿ ತಿಳಿಸಿದಂತೆ ಷರತ್ತುಗಳನ್ವಯ ಲೀಜ ಮೊತ್ತ ಭರಣಾ ಮಾಡಿಕೊಂಡು 30 ವರ್ಷ ಅವಧಿಗೆ ಕರಾರು ಮಾಡಿಕೊಂಡು ಮಂಜೂರಿಸಲು ತಮ್ಮ ವ್ಯಾಪಿಯಲ್ಲಿ ಬರುವದರಿಂದ ಪ್ರಸ್ತಾವನೆಯನ್ನು ಪತ್ರದೊಂದಿಗೆ ಲಗತ್ತಿಟ್ಟು ಮರಳಿ ಕಳುಹಿಸಿರುತ್ತಾರೆ.

7) ಸಾಮಾನ್ಯ ಸಭೆ ದಿ: 20-01-2018ರಲ್ಲಿ ಸಂಘದ ಮನವಿಯ್ನು ಸಭೆಯಲ್ಲಿ ಮಂಡಿಸಿ ಚರ್ಚಿಸಿ ಸರ್ಕಾರದ ಆದೇಶ 24/05/2017 ರ ಪ್ರಕಾರ ಠರಾವು ಸಂಖ್ಯೆ: 152 ದಿನಾಂಕ: 20-01-2018 ರಡಿ ಮಂಜೂರಿ ನೀಡಲು ಸೂಚಿಸಿ ಆದೇಶ ಹಾಗೂ 30 ವರ್ಷದವರೆಗೆ ಪ್ರತಿ ಚ.ಅಡಿಗೆ ರೂ.5/- ರಂತೆ ನೀಡುವಂತೆ ನಿರ್ಣಯ ಅಂಗೀಕರಿಸಿ ಒಟ್ಟು 17499 ಚ.ಅ ಅಳತೆ ನಿವೇಶನವನ್ನು ನೀಡಿದ್ದು ಅದರಂತೆ 87495 ವಾರ್ಷಿಕವಾಗಿ ಭೂಬಾಡಿಗೆ ಹಣ ಭರಣಾ ಮಾಡಲು ಮತ್ತು ಒಪ್ಪಿಗೆ ಪತ್ರ ನಿಡಲು ಸದರಿ ಸಂಘದ ಅಧ್ಯಕ್ಷರಿಗೆ 30-01-2018 ರಂದು ಪತ್ರ ಮೂಲಕ ತಿಳಿಸಿರುತ್ತಾರೆ.

8) ಪುರಸಭೆ ಕಾರ್ಯಾಲಯದ ಪತ್ರ ಸಂಖ್ಯೆ: ಮುಸಮು/ಪ್ರ.ಸ/2017-18 ದಿ: 17-03-2018 ರ

ಪತ್ರದಲ್ಲಿ ಸಾ.ಸಭೆ ದಿ: 28-02-2018 ಠರಾವು ನಂ 157 ರಲ್ಲಿ ಸರ್ಕಾರಿ ಆದೇಶ ಸಂ Karnataka Planning Authorities (Allotment of Circle amenities sites) Rules 2016 rule 3(1) 5(20) 14 & 15 ರನ್ವಯ ಹಾಗೂ 10/2016 ಮತ್ತು 20/2018 ರ ಸಾಮಾನ್ಯ ಸಭೆ ಠರಾವುಗಳ ಷರತ್ತಿಗೊಳಪಟ್ಟು ನಿವೇಶನವನ್ನು ಮಂಜೂರಿಸಿದ ಉದ್ದೇಶಕ್ಕೆ ಮಾತ್ರ ಉಪಯೋಗಿಸಲು ಹಾಗೂ ಕಾಲಕಾಲಕ್ಕೆ ಸರ್ಕಾರ/ ಸ್ಥಳೀಯ ಸಂಸ್ಥೆ ಹೊರಡಿಸುವ ಆದೇಶಕ್ಕೆ ಒಳಪಟ್ಟು 30 ವರ್ಷಗಳ ಮೀರಿದ ಅವಧಿಗಳಿಗಾಗಿ ಗುತ್ತಿಗೆ ಮೊಬಲಗವನ್ನು ಭರಣಾ ಮಾಡಿದ ನಂತರ ಗುತ್ತಿಗೆ ಒಪ್ಪಂದ ಪತ್ರವನ್ನು ಪ್ರ ಪತ್ರ 3 ರನ್ವಯ ಸ್ವಂತ ಖರ್ಚಿನಲ್ಲಿ ನೋಂದಾಯಿಸಿಕೊಳ್ಳುವ ಷರತ್ತಿಗೊಳಪಟ್ಟು ಮೇಲ್ಕಾಣಿಸಿದ ಸಂಘಕ್ಕೆ 01/04/2018 ರಿಂದ ನೀಡಲಾಗಿದೆ. ಅದರಂತೆ ದಿ: 23-03-2018 ರಂದು ಪಟ್ಟಣದ ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ಅ�an ಖಬಅ ಒಜಟ ಹಾಗೂ ಅಧ್ಯಕ್ಷರು ಶ್ರೀ ವಾಸು ಪೂಜ್ಯ ಜೈನ ಶ್ವೇತಾಂಭರ ಸಂಘ(ರಿ) ಮುದ್ದೇಬಿಹಾಳ ಇಬ್ಬರೂ ಸೇರಿ ಆ ಬಾಡಿಗೆ (ಗುತ್ತಿಗೆ) ಠರಾವು ಪತ್ರ Lease Deed of thirty Years ನೋಂದಾಯಿಸಲಾಗಿದೆ. (ದಸ್ತ ನಂ 6719/ದಿನಾಂಕ: 23-03-2018)

9) ದಿನಾಂಕ: 20-01-2018 ರಂದು ಜರುಗಿದ ಸಾಮಾನ್ಯ ಸಭೆಯಲ್ಲಿ ಚರ್ಚಿಸಿ ಸರ್ಕಾರಿ ಆದೇಶ ದಿನಾಂಕ: 24-05-2017 ಪ್ರಕಾರ 30 ವರ್ಷದ ಅವಧಿ ಪ್ರತಿ ಚ.ಅ ರೂ.5/- ನಿರ್ಣಯ ಅಂಗೀಕರಿಸಿರುತ್ತಾರೆ. ಹಾಗೂ ದಿ: 28-02-2018 ರ ಸಾಮಾನ್ಯ ಸಭೆಯಲ್ಲಿ ಪುನಃ ಸದರಿ ವಿಷಯವನ್ನು ಚರ್ಚಿಸಿ ಭೂ ಬಾಡಿಗೆ ಮೊತ್ತವನ್ನು ರೂ. 5/- ರ ಬದಲಾಗಿ ರೂ 2/- ನಿಗಧಿ ಪಡಿಸಿರುತ್ತಾರೆ. ಅದರಂತೆ ಒಟ್ಟು 34,998 ಗಳನ್ನು ಭರಣಾ ಮಾಡಿಕೊಂಡು ಒಪ್ಪಿಗೆ ಪತ್ರ ನೀಡಲು

ಅಧ್ಯಕ್ಷರು ಜೈನ ಸಂಸ್ಥೆ ಇವರಿಗೆ ಪುರಸಭೆಯಿಂದ ದಿ: 02-03-2018 ರಂದು ತಿಳಿಸಿರುತ್ತಾರೆ. ಮಾನ್ಯ ಯೋಜನಾ ನಿರ್ದೇಶಕರು ಜಿಲ್ಲಾ ನಗರಾಭಿವೃದ್ಧಿಕೋಶ ಬಿಜಾಪುರ ಇವರ ಪತ್ರ ದಿನಾಂಕ: ೦5/12/2018 ರಲ್ಲಿ ಶ್ರೀ ಸಂಗಪ್ಪ ಚಂದಪ್ಪ ಗಸ್ತಗಾರ ಸಾ॥ ಕುಂಟೋಜಿ ತಾ॥ ಮುದ್ದೇಬಿಹಾಳ ಇವರು ಸಲ್ಲಿಸಿದ ಅರ್ಜಿ ದಿ: 15/11/2018 ರ ಅರ್ಜಿಯಲ್ಲಿ ಶ್ರೀ ವಾಸು ಪೂಜ್ಯ ಜೈನ ಶ್ವೇತಾಂಬರ ಸಂಘ (ರಿ) ಮುದ್ದೇಬಿಹಾಳ ಇವರಿಗೆ ದಿ: 23-03-2018 ರಂದು ಪುರಸಭೆಯಿಂದ ನೋಂದಣಿ ಮಾಡಿಕೊಟ್ಟಿದ್ದು ಇರುತ್ತದೆ. ಸದರಿ ಸಭೆಗೆ ಪ್ರತಿ ರೂ. 34998/- ಗಳ ಹಾಗೂ ನಿವೇಶನವನ್ನು 30 ವರ್ಷಗಳ ಗುತ್ತಿಗೆರ ಆಧಾರದ ಮೇಲ ನೀಡಿದ್ದು ಇರುತ್ತದೆ. ಸದರಿ ಸಂಘಕ್ಕೆ ನಿವೇಶನ ನೀಡುವ ಮುಂಚೆ ಮಾನ್ಯ ಜಿಲ್ಲಾಧಿಕಾರಿಗಳು ವಿಜಯಪುರ ಇವರ ಮಂಜೂರಾತಿ ಪಡೆದ ಬಗ್ಗೆ ಎಲ್ಲ ದಾಖಲಾತಿಗಳನ್ನು 3 ದಿನಗಳೊಳಗಾಗಿ ಯೋಜನಾ ನಿರ್ದೇಶಕರ ಕಾರ್ಯಾಲಕ್ಕೆ ಖುದ್ದಾಗಿ ಬಂದು ವರದಿ ಸಲ್ಲಿಸಲು ಸೂಚಿಸಿರುತ್ತಾರೆ. ತಮ್ಮ ಕಾರ್ಯಾಲಯದ ಪತ್ರ 02/02/2019 ರಲ್ಲಿ ದಿನಾಂಕ: 10-12-2018 ರಂದು ಪುರಸಭೆಯವರು ಸಲ್ಲಿಸಿದ ವರದಿಯನ್ನು ಪರಿಶೀಲಿಸಿ ಸದರಿ ಸಂಘಕ್ಕೆ ದಿನಾಂಕ: 23-03-2018 ರಂದು ನೊಂದ ಮಾಡಿರುತ್ತೀರಿ ಸದರಿ ಸಂಘದವರಿಗೆ ಪ್ರತಿ ವಾರ್ಷಿಕ 34998/- ಗಳ ಹಾಗೂ ನಿವೇಶನವನ್ನು 30 ವರ್ಷಗಳ ಗುತ್ತಿಗೆ ಆಧಾರದ ಮೇಲೆ ನೀಡಿದ್ದು ಸರ್ಕಾರದ ನಗರಾಭಿವೃದ್ಧಿ ಇಲಾಖೆ ಬೆಂಗಳೂರು ಸುತ್ತೋಲೆ ದಿ: 30-01-2018 ರಲ್ಲಿಯ ಕ್ರ.ಸಂ 4ರ ಅಂಶವನ್ನು ಪರಿಗಣಿಸದೆ ಮಾನ್ಯ ಜಿಲ್ಲಾಧಿಕಾರಿಗಳು ವಿಜಯಪುರ ಇವರ ಅನುಮೋದನೆ ಪಡೆದು ಸದರಿ ಜಾಗೆಯನ್ನು ಲೀಜ ಮಂಜೂರಿಸಿದ್ದು ಇರುತ್ತದೆ. ಮಾನ್ಯ ಯೋಜನಾ ನಿರ್ದೇಶಕರು ಜಿಲ್ಲಾನಗರಾಭಿವೃದ್ಧಿಕೋಶ ವಿಜಯಪುರ ಇವರ ಪತ್ರ 23-12-2017 ರಲ್ಲಿಯ ಷರತ್ತುಗಳನ್ವಯ ಲೀಜ ಮೊತ್ತ ಭರಣಾ ಮಾಡಿಕೊಂಡು 30 ವರ್ಷಗಳ ಲೀಜ ಅವಧಿಗೆ ಕರಾರ ಮಾಡಿಕೊಂಡು

ಲೀಜ ಮಂಜೂರಿಸಲು ಸೂಚಿಸಿದಂತೆ ಸರ್ಕಾರದ ಸುತ್ತೋಲೆ ದಿ:30-01-2018 ರಂತೆ ಯಾವುದೇ ಕ್ರಮ ಕೈಗೊಂಡಿರುವದಿಲ್ಲ. ಆದ್ದರಿಂದ ಸಂಬಂಧಿಸಿದ ವಿಷಯ ನಿರ್ವಾಹಕರು (ಶ್ರೀ ರಮೇಶ ಮಾಡಬಾಳ) ಹಿಂದಿನ ಮುಖ್ಯಾಧಿಕಾರಿಗಳು (ಶ್ರೀಮತಿ ಎಸ್.ಎಸ್.ಬಾಗಲಕೋಟ) ಇವರ ಮೇಲೆ ಶಿಸ್ತಿನ ಕ್ರಮವನ್ನು ಜರುಗಿಸಿ ಪ್ರಸ್ತಾವನೆ ಸಲ್ಲಿಸಲು ಸೂಚಿಸಲಾಗಿದೆ.

ಅದರಂತೆ ದಿ: 02/02/2019 ರಂದು ಸಂಬಂಧಿಸಿದ ಮುಖ್ಯಾಧಿಕಾರಿಗಳು & ವಿಷಯ ನಿರ್ವಾಹಕರಿಗೆ ಕಾ.ಕೇಳ.ನೋ.ನ್ನು ಸಹ ನೀಡಲಾಗಿದೆ. ಮುದ್ದೇಬಿಹಾಳ ಪುರಸಭೆ ಮುಖ್ಯಾಧಿಕಾರಿಗಳು ಇವರು ದಿನಾಂಕ: 05-02-2019 ಕ್ರ.ಸಂ ಪ್ರಸಮು/ಕಾ.ಕೇ.ನೋ/2018-19/408 ರ ಪತ್ರದಲ್ಲಿ ಮಾನ್ಯ ಯೋಜನಾ ನಿರ್ದೇಶಕರು ಜಿಲ್ಲಾ ನಗರಾಭಿವೃದ್ಧಿ ಕೋಶ ವಿಜಯಪುರ ಇವರ ಕಾ.ಕೇ.ನೋ ದಿ: 02-02-2019ನ್ನು ಉಲ್ಲೇಖಿತ 2 ದಿನಗಳಲ್ಲಿ ಲಿಖಿತ ಹೇಳಿಕೆ ಸಲ್ಲಿಸಲು ಶ್ರೀಮತಿ ಎಸ್.ಎಸ್.ಬಾಗಲಕೋಟ ಹಿಂದಿನ ಮುಖ್ಯಾಧಿಕಾರಿಗಳು ಹಾಗೂ ಶ್ರೀ ರಮೇಶ ಮಾಡಬಾಳ ಎಸ್‌ಡಿಎ ಹಿಂದಿನ ವಿಷಯ ನಿರ್ವಾಹಕರು ಇವರಿಗೆ ಪತ್ರದ ಮುಖಾಂತರ ತಿಳಿಸಲಾಗಿದೆ. ಸದರಿ ವಿಷಯದ ಕುರಿತು ನೀಡಿದ ಪತ್ರದನ್ವಯ ಹಿಂದಿನ ಮುಖ್ಯಾಧಿಕಾರಿಗಳು ಆದ ಶ್ರೀಮತಿ ಎಸ್.ಎಸ್.ಬಾಗಲಕೋಟ ಇವರು ಯಾವುದೇ ವರದಿ ನೀಡಿರುವುದಿಲ್ಲ. ಹಾಗೂ ವಿಷಯ ನಿರ್ವಾಹಕರಾದ ಶ್ರೀ ರಮೇಶ ಮಾಡಬಾಳ ಎಸ್‌ಡಿಎ ಇವರು ಹಿಂದಿನ ಮುಖ್ಯಾಧಿಕಾರಿಗಳು ಇವರು ನೇರವಾಗಿ ಸಬ್ ರಜಿಸ್ಟರ್ ಕಛೇರಿಗೆ ಹೋಗಿ ಅವರೇ ಲೀಜ ಪತ್ರಕ್ಕೆ ನೊಂದ ಮಾಡಿರುತ್ತಾರೆ ಎಂದು ತಿಳಿಸಿ ಇದರಲ್ಲಿ ಅವರ ಪಾತ್ರ ಇರುವದಿಲ್ಲ ಅಂತಾ ವರದಿ ನೀಡಿದ್ದು ಮತ್ತು ವಿಧಿಸಿದ ಕರಾರನ್ವಯ ರದ್ದು ಪಡಿಸಬಹುದಾಗಿದೆ ಅಂತಾ ವರದಿ ನೀಡಿರುತ್ತಾರೆ. ಆದ್ದರಿಂದ ಸದರಿ ಲೀಜ ರದ್ದು ಮಾಡಲು ಆದೇಶಿಸಲು & ಹಿಂದಿನ ಮುಖ್ಯಾಧಿಕಾರಿಗಳು ಇವರ ಮೇಲೆ ಶಿಸ್ತು ಕ್ರಮ ಕೈಗೊಳ್ಳಲು ಮತ್ತು ಹಾಲಿ

ಮುಖ್ಯಾಧಿಕಾರಿಗಳು ಇವರಿಗೆ ನೀಡಿದ ಕಾ.ಕೇ ನೋಟಿಸ ಮುಕ್ತಾಯಗೊಳಿಸಲು ವಿನಂತಿಸಿರುತ್ತಾರೆ.

ಮುದ್ದೇಬಿಹಾಳ ಪುರಸಭೆ ಆದೇಶ ಕ್ರ.ಸಂಖ್ಯೆ: ಪುಸಮು/ವಿವಾಸ/ 2018-19/01 ದಿ:19-03-2019 ರಲ್ಲಿ ಪಿರಿಕೆಯಲ್ಲಿ ವಿವರಿಸಿದಂತೆ ಶ್ರೀವಾಸು ಪೂಜ್ಯ ಜೈನ ಶ್ವೇತಾಂಬರ ಸಂಘ (ರಿ) ಇವರಿಗೆ ಠರಾವು ಸಂ 78/05-10-2016 ರಲ್ಲಿ ಸದರಿ ಸಂಸ್ಥೆಗೆ 28-02-2018 ನಿರ್ಣಯ ಸಂಖ್ಯೆ 157 ನೇದ್ದರಲ್ಲಿ ನಿಗಧಿಪಡಿಸಿದಂತೆ ಫೀ ಭರಣಾ ಮಾಡಿಕೊಂಡು 30 ವರ್ಷದವರಿಗೆ ಸದರಿ ಸಂಸ್ಥೆಗೆ ಲೀಜ ಮುಖಾಂತರ ನೀಡಿದ್ದನ್ನು ಸಂಗಪ್ಪ ಚಂದಪ್ಪ ಗಸ್ತಗಾರ ಇವರ ತಕರಾರು ಅರ್ಜಿ ಇತ್ಯರ್ಥವಾಗುವರೆಗೂ ಹಾಗೂ ಮಾನ್ಯ ಜಿಲ್ಲಾಧಿಕಾರಿಗಳು ವಿಜಾಪುರಗಳಿಂದ ಮಂಜೂರಾತಿ ಪಡೆಯುವವರೆಗೆ ಸದರಿ ಜಾಗೆ ಲೀಜ ಅವಧಿಯನ್ನು ರದ್ದುಗೊಳಿಸಿ ಕರಾರ ನಂಬರ (13) ರ ಷರತ್ತಿಗೊಳಪಟ್ಟು ಸದರಿ ಜಾಗೆಯನ್ನು ಇವತ್ತಿನ ದಿವಸಕ್ಕೆ ಕಬ್ಜಾ ಪಡೆದುಕೊಂಡು ಲೀಜ ರದ್ದುಗೊಳಿಸಲು ಆದೇಶಿಸಿರುತ್ತಾರೆ. ಈ ಕುರಿತು ಮಾನ್ಯ ಯೋಜನಾ ನಿರ್ದೇಶಕರು ಜಿಲ್ಲಾ ನಗರಾಭಿವೃದ್ಧಿಕೋಶ ವಿಜಯಪುರ ಇವರು ಉಪನೋಂದಣಾಧಿಕಾರಿ ಮುದ್ದೇಬಿಹಾಳ ಇವರಿಗೆ ಅಧ್ಯಕ್ಷರು ವಾಸು ಪೂಜ್ಯ ಜೈನ ಶ್ವೇತಾಂಬರ ಸಂಘ (ರಿ) ಇವರಿಗೆ ಸದರಿ ಮಂಜೂರಿಸಿದ ಜಾಗೆಯನ್ನು ರದ್ದುಗೊಳಿಸುವ ಕುರಿತು ಮುಂದಿನ ಕ್ರಮಕ್ಕಾಗಿ ಸಲ್ಲಿಸಿರುತ್ತಾರೆ.

10) ಮುದ್ದೇಬಿಹಾಳ ಪಟ್ಟಣದ ಸಬ್ ರಜಿಸ್ಟರ್ 1) ಮುಖ್ಯಾಧಿಕಾರಿಗಳು ಪುರಸಭೆ ಮುದ್ದೇಬಿಹಾಳ 2) ಅಧ್ಯಕ್ಷರು ವಾಸು ಪೂಜ್ಯ ಜೈನ ಶ್ವೇತಾಂಬರ ಸಂಘ (ರಿ) ಮುದ್ದೇಬಿಹಾಳ ಇವರಿಗೆ ಮಾನ್ಯ ಮುಖ್ಯಾಧಿಕಾರಿಗಳು ಪುರಸಭೆ ಮುದ್ದೇಬಿಹಾಳ ಇವರು ಲೀಜ ಅವಧಿಯನ್ನು ರದ್ದುಗೊಳಿಸಿದ ಪ್ರಯುಕ್ತ ತಕ್ಷಣ ನೋಂದಣಿ & ಮುದ್ರಾಂಕ ಕಾಯ್ದೆ ಅನ್ವಯ ನೋಂದಾಯಿತ ನಿವೇಶನ ಮಾಲೀಕರು ಹಾಗೂ ಬಾಡಿಗೆದಾರರು ಅವರ ಕಚೇರಿಗೆ ತೆರಳಿ ದಿ: 23-03-2018 ರಂದು

ನೋಂದಣಿಯಾದ ಸಂಖ್ಯೆ: 6710/2017-18 ನೇದ್ದರ ಬಾಡಿಗೆ ಕರಾರ ಪತ್ರವನ್ನು ರದ್ದುಗೊಳಸುವಂತೆ ಸೂಕ್ತ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

ಕಛೇರಿಯ ಮೇಲಿನ ವಿಷಯ ಸಂಬಂಧಪಟ್ಟ ಕಡತವನ್ನು ಪರಿಶೀಲಿಸಲಾಗಿ ವಿವರವು ಈ ಕೆಳಗಿನಂತೆ ಇರುತ್ತದೆ.

1) ಶ್ರೀ ವಾಸು ಪೂಜ್ಯ ಜೈನ ಶ್ವೇತಾಂಬರ ಸಂಸ್ಥೆ ಮುದ್ದೇಬಿಹಾಳ ಇವರು ದಿನಾಂಕ: 01-10-2017 ರಂದು ಮುಖ್ಯಾಧಿಕಾರಿಗಳು ಮುದ್ದೇಬಿಹಾಳ ಇವರಿಗೆ ಹುಡ್ಕೋ ಬಡಾವಣೆ ಮಿನಿ ವಿಧಾನಸೌಧ ಹಿಂದಿನ ಜಾಗೆಯನ್ನು ಅವರ ಸಂಸ್ಥೆಗೆ ಯೋಗ ಶಿಬಿರ ಹಾಗೂ ಧಾರ್ಮಿಕ ಚಟುವಟಿಕೆಗಳಿಗಾಗಿ ಸಮಾಜದ ಅಭಿವೃದ್ಧಿಗೋಸ್ಕರ ಮಂಜೂರಿಸಲು ಕೋರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.

2) ಸದರಿ ವಿಷಯವನ್ನು ದಿನಾಂಕ: 05-10-2016 ರಂದು ಮುಂಜಾನೆ 11-00 ಗಂಟೆಗೆ ಜರುಗಿದ ಸಾಮಾನ್ಯ ಸಭೆಯಲ್ಲಿ ವಿಷಯ ನಂ: 17 ನ್ನು ಮಂಡಿಸಿ ಮೇಲ್ಕಾಣಿಸಿದ ಜಾಗೆಯನ್ನು ಹುಡ್ಕೋ ಕಾಲನಿ ನಿರ್ಮಿಸುವ ಸಮಯದಲ್ಲಿ ಸಾರ್ವಜನಿಕ ಉದ್ದೇಶಕ್ಕೆ ಮೀಸಲಟ್ಟದ್ದು ಇದರ ಚಕ್ ಬಂದಿ ಪೂರ್ವ: ಮಿನಿವಿಧಾನಸೌಧ ಪಶ್ಚಿಮಕ್ಕೆ: ರಸ್ತೆ ಉತ್ತರಕ್ಕೆ: ಉದ್ಯಾನವನ ದಕ್ಷಿಣಕ್ಕೆ ಪುರಸಭೆ ಎಸ್‌ಟಿಪಿ ಪ್ಲಾಂಟ್ ಚಕ್‌ಬಂದಿ ಹೊಂದಿರುವ ನಿವೇಶನವನ್ನು ಧಾರ್ಮಿಕ ಚಟುವಟಿಕೆ ಹಾಗೂ ಯೋಗ ಶಿಬಿರ, ಜ್ಞಾನ ಮಾಡಲು ಸಮುದಾಯ ಭವನ ನಿರ್ಮಾಣ ಮಾಡುವ ಮನವಿಯನ್ನು ಪರಿಗಣಿಸಿ ಸಾರ್ವಜನಿಕರಿಗೆ ಅನುಕೂಲವಾಗುವದರಿಂದ ಸೂಚಿತ ಸಂಘಕ್ಕೆ ನಿಯಮಾನುಸಾರ ಕ್ರಮ ಜರುಗಿಸಿ ನೀಡುವಂತೆ ಮುಖ್ಯಾಧಿಕಾರಿಗಳಿಗೆ ಸೂಚಿಸಿ ನಿರ್ಣಯ ಅಂಗಿಕರಿಸಿರುತ್ತಾರೆ.

3) ಪುರಸಭೆ ಮುದ್ದೇಬಿಹಾಳದ ಆಸ್ತಿ ತೆರಿಗೆ ವಹಿ ಕೆಎಮ್‌ಎಫ್ 24 (ನಿಯಮ 53(1)(ಅ))ರ

2016-17ನೇ ಸಾಲಿನ ಆಸ್ತಿ ತೆರಿಗೆ ಬೇಡಿಕೆ, ಸಂಗ್ರಹಣೆ ಬಾಕಿ ಹಾಗೂ ನಮೂನೆ-3 ರ ರಜಿಸ್ಟ್ರದ ವಾರ್ಡ ಸಂ-02 ಪುಟ ಸಂಖ್ಯೆ 160 ರಲ್ಲಿ ದಾಖಲ ಇರುವ ಆಸ್ತಿ ಕ್ರ.ನಂ 317 ನಿವೇಶನ ನಂ ಎಮ್‌ಐಜಿ-347 ಕಾಲಂದಲ್ಲಿ ಮುಖ್ಯಾಧಿಕಾರಿಗಳು ಪುರಸಭೆ ಮುದ್ದೇಬಿಹಾಳ ಸಾರ್ವಜನಿಕ ಜಾಗೆ ಹುಡ್ಕೋ ಕಾಲನಿ ವಿಸ್ತೀರ್ಣ 17499 ಚ.ಅಡಿ ಖಾಲಿ ನಿವೇಶನದ ಉದ್ಧೃತ ನಕಲು ಪ್ರತಿಯು ದಿನಾಂಕ: 28-02-2017 ರಂದು ನೀಡಿದ ಪ್ರತಿಯನ್ನು ಕಂಡು ಬಂದಿದೆ.

ಮೇಲ್ಕಾಣಿಸಿದ ಎಲ್ಲ ಅಂಶಗಳನ್ನು ಕಡತದಲ್ಲಿರುವ ಎಲ್ಲ ದಾಖಲಾತಿಗಳೊಂದಿಗೆ ಪರಿಶೀಲಿಸಲಾಗಿ

1) ಮೇಲ್ಕಾಣಿಸಿದ ಮುದ್ದೇಬಿಹಾಳ ಪಟ್ಟಣದ ಸಿ.ಟಿ.ಎಸ್ ನಂ:85 ನೇದ್ದರಲ್ಲಿ ಕೆ.ಹೆಚ್.ಬಿ ಇಂದ ರಚಿಸಿದ ವಿನ್ಯಾಸದಲ್ಲಿಯ ಆಸ್ತಿ ಕ್ರಮಸಂಖ್ಯೆ: 317, ಎಮ್‌ಐಜಿ 347 ನೇದ್ದನ್ನು ಯುಟಿಲಿಟಿಸ್ & ಸರ್ವಿಸಿಸ್‌ಗಾಗಿ ಕಾಯ್ದಿರಿಸಿದ ನಿವೇಶನವು 1342.95 ಚ.ಮೀಟರ ಜಾಗವು ಖಾಲಿ ಇರುವದು. ಹಾಗೂ ಸದರಿ ಜಾಗೆಯು ಪುರಸಭೆಯಲ್ಲಿ ಆಸ್ತಿ ಕ್ರಮಸಂಖ್ಯೆ: 317, ಎಮ್‌ಐಜಿ 347ರ ಕ್ಷೇತ್ರ 17499 ಚ.ಅಡಿ ಜಾಗವು ದಾಖಲಿಸಿಕೊಂಡು ದಿನಾಂಕ: 28-02-2017 ರಲ್ಲಿ ಕೆ.ಎಮ್.ಎಫ್-24 ರ ಆಸ್ತಿ ರಜಿಸ್ಟರ್‌ಕ್ಕೆ ದಾಖಲಿಸಿನಮೂನೆ-3ರನ್ನು ನೀಡಿರುತ್ತಾರೆ.

2) ಮಾನ್ಯ ಜಿಲ್ಲಾಧಿಕಾರಿಗಳು ವಿಜಯಪುರ ರವರು ಮುಖ್ಯಾಧಿಕಾರಿಗಳು ಪುರಸಭೆ ಮುದ್ದೇಬಿಹಾಳ ಇವರಿಗೆ ಪತ್ರ ಸಂಖ್ಯೆ: ಕ್ರ/ಜಿಲಕೋ-1/ನಿವೇಶನ/ಸಿಆರ್ /2017-18 ದಿ: -12-2017 ರಲ್ಲಿ ಸದರಿ ಜಾಗೆಯು ಸರ್ಕಾರಿ ಆದೇಶ ಸಂ Karnataka Planning Authorities (Allotment of Circle amenities sites) Rules 2016 rule 3(1) 5(20) 14 & 15 ರಲ್ಲಿ ತಿಳಿಸಿದಂತೆ ಷರತ್ತುಗಳನ್ವಯ ಲೀಜ ಮೊತ್ತವನ್ನು ಭರಣಾ ಮಾಡಿಸಿಕೊಂಡು 30 ವರ್ಷದ ಅವಧಿಗೆ ಲೀಜ

ಕರಾರು ಮಾಡಿಕೊಂಡು ಮಂಜೂರಿಸಲು ತಮ್ಮ ವ್ಯಾಪ್ತಿಯಲ್ಲಿ ಬರುವದೆಂದು ತಿಳಿಯಪಡಿಸಿ ಪ್ರಸ್ತಾವನೆಯನ್ನು ಪತ್ರದೊಂದಿಗೆ ಲಗತ್ತಿಸಿ ಮರಳಿ ಪುರಸಭೆಗೆ ಕಳುಹಿಸಿರುತ್ತಾರೆ.

3) ಸದರಿ ಜಾಗೆಯು ಬಾಡಿಗೆದಾರರಿಗೆ ಬಾಡಿಗೆ ತರಿಕ ನೀಡುವ ಕಾಲಕ್ಕೆ ಉಪನೋಂದಣಾಧಿಕಾರಿಗಳ 1957ರ ಮುದ್ರಾಂಕ ಶುಲ್ಕ ಕಾಯ್ದೆ ರನ್ವಯ ನಿಗಧಿಪಡಿಸಿದ ನಿವೇಶನ ಬೆಲೆಯ ಮೇಲೆ ಬಾಡಿಗೆಯನ್ನು ನಿಗಧಿಪಡಿಸಿರುವದಿಲ್ಲ. ಹಾಗೂ ಪಟ್ಟಣಕ್ಕೆ ಸಂಬಂಧಿಸಿದ ಸಹಾಯಕ ನಿರ್ದೇಶಕರು ನಗರ ಯೋಜನಾ ಪ್ರಾಧಿಕಾರದಿಂದ ಮೇಲ್ಕಾಣಿಸಿದ ಜಾಗೆಯ ಬಗ್ಗೆ ಅರ್ಜಿದಾರರಿಗೆ ಮಂಜೂರಿಸುವ ಕುರಿತು ಅಭಿಪ್ರಾಯ ಪಡೆದುಕೊಂಡಿರುವದಿಲ್ಲ.

4) ಮಾನ್ಯ ಸರಕಾರದ ಅಧೀನಕಾರ್ಯದರ್ಶಿಗಳು ಪೌರಾಡಳಿತ/2 & ಮಂಡಳಿ ನಗರಾಭಿವೃದ್ಧಿ ಇಲಾಖೆ ಬೆಂಗಳೂರು ರವರ ಸುತ್ತೋಲೆ ಸಂಖ್ಯೆ: ನಅಇ 01 ಟಿಎಂಡಿ 2018 ದಿನಾಂಕ: 30-01-2018 ರ ಷರತುಗಳನ್ವಯ ನಿವೇಶನವು ಮಂಜೂರಿಸಿರುವುದಿಲ್ಲ.

5) ಮಾನ್ಯ ಜಿಲ್ಲಾಧಿಕಾರಿಗಳು ವಿಜಯಪುರ ಇವರು ಶ್ರೀ ಗಸ್ತಗಾರ ಸಲ್ಲಿಸಿದ ಆಕ್ಷೇಪಣೆ ಮೇರೆಗೆ ಸದರಿ ಜಾಗವು ರದ್ದು ಪಡಿಸಲು ಮತ್ತು ಮಂಜೂರಿಸಿದ ಮುಖ್ಯಾಧಿಕಾರಿಗಳಾದ ಶ್ರೀಮತಿ ಎಸ್. ಎಸ್. ಬಾಗಲಕೋಟ ಮತ್ತು ವಿಷಯ ನಿರ್ವಾಹಕರಾದ ಶ್ರೀ ರಮೇಶ ಮಾಡಬಾಳ ಇವರಿಗೆ ಸೇವೆಯಿಂದ ಅಮಾನತು ಮಾಡುವ ಕುರಿತು ಕಾರಣ ಕೇಳಿ ನೋಟಿಸು ಕೊಟ್ಟು ಅವರ ಮೇಲೆ ಶಿಸ್ತಿನ ಕ್ರಮಕ್ಕಾಗಿ ಪ್ರಸ್ತಾವನೆಯನ್ನು ಸಲ್ಲಿಸಲು ಮಾನ್ಯ ಯೋಜನಾ ನಿರ್ದೇಶಕರು ಜಿಲ್ಲಾ ನಗರಾಭಿವೃದ್ಧಿ ಕೋಶ ವಿಜಯಪುರ ಇವರಿಗೆ ಲಿಖಿತವಾಗಿ ತಿಳಿಸಿರುತ್ತಾರೆ. ಅದರಂತೆ ಸಂಬಂಧಿಸಿದ ಮುಖ್ಯಾಧಿಕಾರಿಗಳು ಹಾಗೂ ಸಿಬ್ಬಂದಿಗೆ ಕಾರಣ ಕೇಳುವ ನೋಟಿಸನ್ನು ಹಿಂದಿನ ಮುಖ್ಯಾಧಿಕಾರಿಗಳು ಶ್ರೀಮತಿ ಎಸ್ ಎಸ್ ಬಾಗಲಕೋಟ ಇವರು ವರ್ಗಾವಣೆ ಆಗಿರುವದರಿಂದ ಅವರಿಗೆ ನೊಂದಾಯಿತ ಅಂಚೆ ಮೂಲಕ ನೋಟಿಸನ್ನು ಕಳುಹಿಸಿರುತ್ತಾರೆ. ಆದರೆ ಸದರಿ ಮುಖ್ಯಾಧಿಕರಿಗಳು ಯಾವುದೇ ತರಹದ ವರದಿಯನ್ನು ನೀಡಿರುವುದಿಲ್ಲ. ಹಾಗೂ ಶ್ರೀ ರಮೇಶ ಮಾಡಬಾಳ ಇವರು ನೋಟಿಸನ್ನು ಪಡೆದುಕೊಂಡು ಸದರಿ ನಿವೇಶನವು ಮುಖ್ಯಾಧಿಕಾರಿಗಳ

ನೇರವಾಗಿಶ್ರೀ ವಾಸು ಪೂಜ್ಯ ಜೈನ ಶ್ವೇತಾಂಬರ ಸಂಘ (ರಿ) ಅವರಿಗೆ ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ನೋಂದಾಯಿಸಿರುತ್ತಾರೆ. ಸದರಿ ನೋಂದಾಯಿಸಿರುವ ಕಾರ್ಯದಲ್ಲಿ ನನ್ನದು ಯಾವುದೇ ತರಹದ ಪಾತ್ರ ಇರುವದಿಲ್ಲವೆಂದು ಶ್ರೀ ರಮೇಶ ಮಾಡಬಾಳ ಇವರು ತಿಳಿಸಿರುತ್ತಾರೆ. ಈ ವಿಷಯದ ಕುರಿತು ಮಾನ್ಯ ಯೋಜನಾ ನಿರ್ದೇಶಕರು ಜಿಲ್ಲಾ ನಗರಾಭಿವೃದ್ಧಿ ಕೋಶ ವಿಜಯಪುರ ಇವರಿಗೆ ಮುಂದಿನ ಕ್ರಮ ಕೈಕೊಳ್ಳಲು ಮುಖ್ಯಾಧಿಕಾರಿಗಳು ಪುರಸಭೆ ಮುದ್ದೇಬಿಹಾಳ ಇವರು ವರದಿಯನ್ನು ಸಲ್ಲಿಸಿರುತ್ತಾರೆ.

6) ಅದರಂತೆ, ಉಪನೋಂದಣಾಧಿಕಾರಿಗಳು ಮುದ್ದೇಬಿಹಾಳ ಇವರಿಗೆ ಮೇಲ್ಕಾಣಿಸಿದ ಜಾಗೆಯ ನೋಂದಣಿ ರದ್ದು ಪಡಿಸಲು ಪುರಸಭೆಯಿಂದ ಲಿಖಿತವಾಗಿ ತಿಳಿಸಿರುತ್ತಾರೆ. ಅದಕ್ಕೆ ಅವರು ನೋಂದಾಯಿಸಿದ ಮುಖ್ಯಾಧಿಕಾರಿಗಳು ಹಾಗೂ ಅಧ್ಯಕ್ಷರು ವಾಸು ಪೂಜ್ಯ ಜೈನ ಶ್ವೇತಾಂಭರ ಸಂಘ (ರಿ) ಇವರುಗಳು ಕಾರ್ಯಾಲಯಕ್ಕೆ ಬಂದು ನೋಂದಾಯಿಸಿದ ನೋಂದಣಿಯನ್ನು ರದ್ದು ಪಡಿಸುವ ಕುರಿತು ಕ್ರಮಕೈಕೊಳ್ಳಲು ಲಿಖಿತವಾಗಿ ತಿಳಿಸಿರುತ್ತಾರೆ.ಆದರೆ ಸದರಿ ಪತ್ರದ ಮೇಲೆ ಯಾವುದೇ ರೀತಿ ಕ್ರಮ ಕೈಕೊಳ್ಳದೇ ಇರುವದು ಕಂಡು ಬಂದಿರುತ್ತದೆ.

ಮುಖ್ಯಾಧಿಕಾರಿಗಳಾದ ಶ್ರೀಮತಿ ಎಸ್.ಎಸ್.ಬಾಗಲಕೋಟ ಮತ್ತು ವಿಷಯ ನಿರ್ವಾಹಕರಾದ ಶ್ರಿ ರಮೇಶ ಮಾಡಬಾಳ ಇವರು ನಿವೇಶನವನ್ನು ಹಂಚಿಕೆ ಮಾಡುವಲ್ಲಿ ನಿಯಮಗಳನ್ನು ಪಾಲಿಸದೇ ಮಾನ್ಯ ಸರ್ಕಾರದ ಆದೇಶ ಹಾಗೂ ಪುರಸಭೆ ಕಾಯ್ದೆಯನ್ನು ಉಲ್ಲಂಘಿಸಿರುತ್ತಾರೆ.

**ಅನುಬಂಧ – 7 ಪುಟ ಸಂಖ್ಯೆ: 281/1 ರಿಂದ 16 ರಿಂದ 338, ರವರಗೆ ಲಗತ್ತಿಸಲಾಗಿದೆ.**

**ತನಿಖಾಧಿಕಾರಿಗಳು**

| | | |
|---|---|---|
| ಶ್ರಿ ಜಿ.ಕೆ. ಕಲಬುರ್ಗಿ ಪ್ರ.ದ.ಸ<br>ಮಹಾನಗರಪಾಲಿಕೆ, ವಿಜಯಪುರ | ಶ್ರೀ ಆರ್.ಪಿ.ಜಾಧವ ವಲಯ ಆಯುಕ್ತರು<br>ಮಹಾನಗರಪಾಲಿಕೆ, ವಿಜಯಪುರ | ಶ್ರೀ ಅನಿಲಕುಮಾರ ಮುದ್ದಾ ಸ.ಕಾ.ಅಭಿಯಂತರರು<br>ಜಿಲ್ಲಾ ನಗರಾಭಿವೃದ್ಧಿಕೋಶ ವಿಜಯಪುರ |

| ಅನುಬಂಧ "7" | | |
|---|---|---|
| ಆಕ್ಷೇಪಣೆ ಕ್ರ.ಸಂಖ್ಯೆ | ವಿಷಯ/ವಿವರ | ಪುಟ ಸಂಖ್ಯೆ |
| 8 | 1) ಮಾನ್ಯ ಶ್ರೀ ಸಿ.ಎಸ್.ನಾಡಗೌಡ ಸರಕಾರದ ವಿಶೇಷ ಪ್ರತಿನಿಧಿ ಇವರ ಪತ್ರ ದಿನಾಂಕ: 20-06-2016. | 281/1 ರಿಂದ 281/16 ರಿಂದ 338 |
| | 2) ಸರ್ವೆ ನಂ: 85/2 ರಲ್ಲಿ ಹುಡ್ಕೊ ಇವರು ರಚಿಸಿದ ವಿನ್ಯಾಸ ನಕ್ಷೆ | |
| | 3) ದಿನಾಂಕ: 05-10-2016 ರಂದು ಜರುಗಿದ ಸಾಮಾನ್ಯ ಸಭೆಯ ಠರಾವು ನಂ: 78 ರ ನಕಲು ಪ್ರತಿ. | |
| | 4) ಕನ್ನಡ ಪ್ರಭಾ ದಿನಪತ್ರಿಕೆಯಲ್ಲಿ ದಿನಾಂಕ: 09-02-2016 ರ ಪತ್ರಿಕೆಯಲ್ಲಿ ಸಾರ್ವಜನಿಕ ಪ್ರಕಟಣೆ ಪ್ರಕಟಿಸಿರುತ್ತಾರೆ | |
| | 5) ಶ್ರೀ ಬಲಭೀಮ ನಾಯಿ ವಗ್ಯೆರೆ ಇವರ ನೀಡಿದ ತಕರಾರು ಅರ್ಜಿ ದಿನಾಕ: 04-01-2017 | |
| | 6) ದಿನಾಂಕ: 28-02-2017 ರಂದು ಮಾನ್ಯ ಯೋಜನಾ ನಿರ್ದೇಶಕರಿಗೆ ಮಂಜೂರಾತಿ ಕುರಿತು ನೀಡಿದ ಪ್ರಸ್ತಾವನೆ. | |
| | 7) ಮಾನ್ಯ ಯೋಜನಾ ನಿರ್ದೇಶಕರು ಮಾನ್ಯ ಜಿಲ್ಲಾ ನಗರಾಭಿವೃದ್ಧಿ ಕೋಶ ವಿಜಯಪುರ ಇವರು 11 ನ್ಯೂನ್ಯತೆಗಳನ್ನು ಸರಿ ಪಡಿಸಿ ಮರು ಪ್ರಸ್ತಾವನೆ ಸಲ್ಲಿಸಲು ತಿಳಿಸಿರುವ ಪತ್ರ ದಿನಾಂಕ: 20-05-2017 | |
| | 8) ದಿನಾಂಕ: 19-06-2017 ರಂದು ಮಾನ್ಯ ಯೋಜನಾ ನಿರ್ದೇಶಕರು ಜಿಲ್ಲಾ ನಗರಾಭಿವೃದ್ಧಿ ಕೋಶ ವಿಜಯಪುರ ಇವರಿಗೆ ಮರು ಪ್ರಸ್ತಾವನೆ ನೀಡಿದ ಪ್ರತಿ. | |
| | 9) ದಿನಾಂಕ: 12-2017 ರಂದು ಪುರಸಭೆ ಮುಖ್ಯಾಧಿಕಾರಿಯವರಿಗೆ ಮಾನ್ಯ ಯೋಜನಾ ನಿರ್ದೇಶಕರು ಜಿಲ್ಲಾ ನಗರಾಭಿವೃದ್ಧಿ ಕೋಶ ವಿಜಯಪುರ ಇವರು ಬರೆದ ಪತ್ರದ ನಕಲು | |
| | 10) ಪುರಸಭೆಯ ಠರಾವು ನಂ: 152 ದಿನಾಂಕ: 20-01-2018 ಮತ್ತು ಠರಾವು ನಂ: 157 ದಿನಾಂಕ: 28-02-2018 ರ ನಕಲು ಪ್ರತಿ. | |

| ಅ.ನಂ | ಆಕ್ಷೇಪಣೆ | ವಿಚಾರಣೆ |
|---|---|---|
| 9 | ಆಲಮಟ್ಟಿ ರಸ್ತೆಗೆ ಹೊಂದಿರುವ ಮಳಿಗೆ ಮಾಲೀಕರು ಅಪ್ಪು ರಾವುಜಪ್ಪ ಮದರಿಯವರ ಹೆಸರಿನಲ್ಲಿ ಕಾನೂನು ಬಾಹೀರ ದಾಖಲಿಸಿ ಉತಾರೆ ನೀಡಿದ ಕುರಿತು ಸವೆ ನಂ: 65 ಪ್ಲಾಟ ನಂ: 05 ಗುಂಟಾ ಜಾಗೆಯನ್ನು ದಾಖಲಿಸಿಕೊಂಡ ಅಧಿಕಾರಿ ಮೇಲೆ ಕ್ರಮ ಕೈಗೊಳ್ಳಬೇಕು. | ಶ್ರೀಮತಿ ಎಸ್ ಎಸ್ ಬಾಗಲಕೋಟೆ ಇವರು ಸನ್ 2017 ರಲ್ಲಿ ಮುದ್ದೇಬಿಹಾಳ ಪುರಸಭೆಯ ಮುಖ್ಯಾಧಿಕಾರಿಯಾಗಿ ಕೆಲಸ ನಿರ್ವಹಿಸುವ ಸಮಯದಲ್ಲಿ ಪಟ್ಟಣದ ಸರ್ವೆ ನಂ: 65 ಪ್ಲಾಟ ನಂ: 05 ರ ಗುಂಟಾ ಜಾಗೆಯನ್ನು ದಾಖಲಿಸಿ ಉತಾರೆಯನ್ನು ಪೂರೈಸಿರುತ್ತಾರೆ. ಸನ್ 2021 ರಲ್ಲಿ ಮುದ್ದೇಬಿಹಾಳ ಪುರಸಭೆಯ ಮುಖ್ಯಾಧಿಕಾರಿಗಳು ಹೊರಡಿಸಿದ ಸುತ್ತೋಲೆ ಕ್ರ: ಪುಸಮು/ಗುಂಟಾ/2021-22 ದಿನಾಂಕ: 27-08-2021 ರಲ್ಲಿ ಪಟ್ಟಣದ ವಿವಿಧ ವಾರ್ಡಗಳಲ್ಲಿರುವ ಗುಂಟಾ ಆಸ್ತಿಗಳು ಅನಧಿಕೃತವಾಗಿ ದಾಖಲಿಸಿದ್ದನ್ನು ರದ್ದು ಪಡಿಸಿ ಹೊರಡಿಸಿದ ಸುತ್ತೋಲೆಯ ಪ್ರಕಾರ ಈ ಕೆಳಗಿನ ಕೆ.ಎಮ್.ಎಫ್-24 ಆಸ್ತಿ ರಜಿಸ್ಟರ್‌ದಲ್ಲಿ ದಾಖಲಾದ ಆಸ್ತಿಗಳನ್ನು ರದ್ದು ಪಡಿಸಿರುತ್ತಾರೆ. ವಿವರಗಳು ಈ ಕೆಳಗಿನಂತಿರುತ್ತವೆ. |

| ಅ.ನಂ | ಕೆ.ಎಮ್.ಎಫ್-24 ಆಸ್ತಿ ರಜಿಸ್ಟರ್ | ಆಸ್ತಿಯ ಸರ್ವೆ ನಂ | ಪ್ಲಾಟ್ ನಂ |
|---|---|---|---|
| 1 | 782 | 65 | 02 |
| 2 | 780 | 65 | 02 |
| 3 | 774 | 65 | 06 |
| 4 | 750 | 65 | 06/1 |
| 5 | 695 | 65 | 05 |
| 6 | 617 | 67 | 03 |
| 7 | 657 | 67/ಬ1 | 03 |
| 8 | 669 | 67ಬ | 09 |
| 9 | 675 | 67ಬ1 | 01 |
| 10 | 683 | 67ಬ | 01 |
| 11 | 775 | 65 | 06/1 |
| 12 | 689 | 67/ಬ | 01 |
| 13 | 704 | 67/3 | 01 |

| | | | |
|---|---|---|---|
| 14 | 537/72 | 61 | 01 |

ಸನ್ 2017 ರಲ್ಲಿ ಮುಖ್ಯಾಧಿಕಾರಿಯ ಕಾರ್ಯ ನಿರ್ವಹಿಸುವ ಶ್ರೀಮತಿ ಎಸ್ ಎಸ್ ಬಾಗಲಕೋಟೆ ಇವರು ಸರ್ವೆ ನಂ: 6ರ ಪ್ಲಾಟ ನಂ: 0ರ ನೇದ್ದನ್ನು ಸರ್ಕಾರದ ಸುತ್ತೋಲೆ 31-01-2018 ನೇದ್ದನ್ನು ಉಲ್ಲಂಘಿಸಿ ಗುಂಟಾ ಖಾತೆ ದಾಖಲು ಮಾಡಿದ್ದು ಇರುತ್ತದೆ.

ಅನುಬಂಧ – 8 ಪುಟ ಸಂಖ್ಯೆ: 339,339ಎ ರಿಂದ 388 ರವರಗೆ ಲಗತ್ತಿಸಲಾಗಿದೆ.

**ತನಿಖಾಧಿಕಾರಿಗಳು**

ಶ್ರೀ ಜಿ.ಕೆ ಕಲಬುರ್ಗಿ ಪ್ರ.ದ.ಸ
ಮಹಾನಗರಪಾಲಿಕೆ, ವಿಜಯಪುರ

ಶ್ರೀ ಆರ್.ಪಿ.ಜಾಧವ ವಲಯ ಆಯುಕ್ತರು
ಮಹಾನಗರಪಾಲಿಕೆ, ವಿಜಯಪುರ

ಶ್ರೀ ಅನೀಲಕುಮಾರ ಮುದ್ದಾ ಸ.ಕಾ.ಅಭಿಯಂತರರು
ಜಿಲ್ಲಾ ನಗರಾಭಿವೃದ್ಧಿಕೋಶ ವಿಜಯಪುರ

| ಅನುಬಂಧ "8" | | |
|---|---|---|
| ಆಕ್ಷೇಪಣೆ ಕ್ರಮಸಂಖ್ಯೆ | ವಿಷಯ/ವಿವರ | ಪುಟ ಸಂಖ್ಯೆ |
| ೯ | 1) ಕೆ.ಎಮ್.ಎಫ್ 24 ರಜಿಸ್ಟರ್‌ದಲ್ಲಿ ಅನಧಿಕೃತ 14 ಖಾತೆಗಳನ್ನು ದಾಖಲಿಸಿದ 14 ನಮೂನೆ-3 ರ ನಕಲು ಪ್ರತಿ | ೩೩೯,೩೩೯ಎ ರಿಂದ ೩೮೮ |
| | 2) ಮೇಲ್ಕಾಣಿಸಿದ 14 ಖಾತೆಗಳನ್ನು ರದ್ದು ಪಡಿಸಲು ಮುಖ್ಯಾಧಿಕಾರಿಗಳು ಪುರಸಭೆ ಮುದ್ದೇಬಿಹಾಳ ಇವರ ಸುತ್ತೋಲೆ ದಿ: 27-08-2021 ರ ನಕಲು | |
| | 3) ಅನಧಿಕೃತ ದಾಖಲೆಗಳನ್ನು ಗುರುತಿಸಿ ರದ್ದು ಪಡಿಸುವ ಬಗ್ಗೆ ಕಛೇರಿ ಟಿಪ್ಪಣಿಯ ನಕಲು ಪ್ರತಿ. | |

| ಅ.ನಂ | ಆಕ್ಷೇಪಣೆ | ವಿಚಾರಣೆ |
|---|---|---|
| 10 | ಪುರಸಭೆ ಕಾರ್ಯಾಲಯದಲ್ಲಿನ ಸಿ.ಸಿ ಕ್ಯಾಮೆರಾಗಳು ಬಂದ ಮಾಡಿದ್ದು ಪ್ರಾರಂಭಿಸುವುದು. | ಪುರಸಭೆ ಕಾರ್ಯಾಲಯ ಮುದ್ದೇಬಿಹಾಳದ ವಿಚಾರಣೆಗಾಗಿ ಪುರಸಭೆಗೆ ಭೇಟಿ ನೀಡಿದ ದಿನಾಂಕ: 03-08-2022 ರಂದು ಕಾರ್ಯಾಲಯದಲ್ಲಿದ್ದ ಸಿ.ಸಿ ಕ್ಯಾಮೇರಾಗಳು ಪರಿಶೀಲಿಸಲಾಗಿ ಕಾರ್ಯಾಲಯದ ಸಿ.ಸಿ ಕ್ಯಾಮೇರಾಗಳು ಚಾಲ್ತಿಯಲ್ಲಿರುತ್ತವೆ. |

**ತನಿಖಾಧಿಕಾರಿಗಳು**

ಶ್ರೀ ಜಿ.ಕೆ ಕಲಬುರ್ಗಿ ಪ್ರ.ದ.ಸ
ಮಹಾನಗರಪಾಲಿಕೆ, ವಿಜಯಪುರ

ಶ್ರೀ ಆರ್.ಪಿ.ಜಾಧವ ವಲಯ ಆಯುಕ್ತರು
ಮಹಾನಗರಪಾಲಿಕೆ, ವಿಜಯಪುರ

ಶ್ರೀ ಅನೀಲಕುಮಾರ ಮುದ್ದಾ ಸ.ಕಾ.ಅಭಿಯಂತರರು
ಜಿಲ್ಲಾ ನಗರಾಭಿವೃದ್ಧಿಕೋಶ ವಿಜಯಪುರ

| ಅ.ನಂ | ಆಕ್ಷೇಪಣೆ | ವಿಚಾರಣೆ |
|---|---|---|
| 11 | ಟ್ಟಣದಲ್ಲಿ ನಡೆದ ಕಾಮಗಾರಿಗಳು ಕಳಪೆಯಾಗಿದ್ದು ಅಂದಾಜು ಪತ್ರಿಕೆಗೆ ಮತ್ತು ಕಾಮಗಾರಿಗೂ ಬಹಳ ವ್ಯತ್ಯಾಸವಿದ್ದು ಕ್ರಮ ಕೈಗೊಳ್ಳಬೇಕು. | ದಿ:01-01-2022 ರಿಂದ ದಿ:03-08-2022ರ ವರೆಗೆ ಬಿಲ್ ಪಾವತಿಸಲಾದ ಕಡತಗಳನ್ನು ಪರಿಶೀಲಿಸಲಾಗಿ, ಸದರಿ ಕಾಮಗಾರಿಗಳನ್ನು ಸರಕಾರದ ನಿಯಮದ ಪ್ರಕಾರ ಟೆಂಡರ ಕರೆದು ಟೆಂಡರ ದರವಾರುಗಳನ್ನು ಸಕ್ಷಮ ಪ್ರಾಧಿಕಾರದಿಂದ ಮಂಜೂರಾತಿ ಪಡೆದುಕೊಂಡು ಕಾರ್ಯಾದೇಶ ನೀಡಿರುತ್ತಾರೆ. ಸದರಿ ಬಿಲ್ ಗಳನ್ನು ಪಾವತಿಸುವಾಗ 3ನೇ ವ್ಯಕ್ತಿಯಿಂದ ಸದರಿ ಕಾಮಗಾರಿಗಳಿಗೆ ಬಳಸಿದ ಸಾಮಗ್ರಿಗಳ ಗುಣಮಟ್ಟ ವರದಿ ಪಡೆದುಕೊಂಡು ಹಾಗೂ ಸದರಿ ಕೆಲಸವು ಗುಣಮಟ್ಟದಾಗಿದೆ ಎಂದು ವರದಿ ಪಡೆದುಕೊಂಡ ನಂತರ ಈ ಹಿಂದಿನ ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ಕಾರ್ಯಪಾಲಕ ಅಭಿಯಂತರರು ಸ್ಥಳ ಪರಿಶೀಲನೆ ಮಾಡಿ ಬಿಲ್ ಪಾವತಿಸಿರುವುದು ಕಂಡುಬಂದಿದ್ದು, ಯಾವುದೇ ಕಾಮಗಾರಿಗಳು ಕಳಪೆಯಾಗಿರುವ ಬಗ್ಗೆ ಉಲ್ಲೇಖ ಇರುವುದಿಲ್ಲ. |

**ತನಿಖಾಧಿಕಾರಿಗಳು**

| | | |
|---|---|---|
| ಶ್ರೀ ಜಿ.ಕೆ. ಕಲಬುರ್ಗಿ ಪ್ರ.ದ.ಸ<br>ಮಹಾನಗರಪಾಲಿಕೆ, ವಿಜಯಪುರ | ಶ್ರೀ ಆರ್.ಪಿ.ಜಾಧವ ವಲಯ ಆಯುಕ್ತರು<br>ಮಹಾನಗರಪಾಲಿಕೆ, ವಿಜಯಪುರ | ಶ್ರೀ ಅನೀಲಕುಮಾರ ಮುದ್ದಾ ಸ.ಕಾ.ಅಭಿಯಂತರರು<br>ಜಿಲ್ಲಾ ನಗರಾಭಿವೃದ್ಧಿಕೋಶ ವಿಜಯಪುರ |

| ಅ.ನಂ | ಆಕ್ಷೇಪಣೆ | ವಿಚಾರಣೆ |
|---|---|---|
| 12 | ನಗರೋತ್ಥಾನ-4ನೇ ಹಂತದ ಕ್ರಿಯಾಯೋಜನೆ ವಿಷಯ ಕುರಿತು ಪುರಸಭೆ ಸಾಮಾನ್ಯ ಸಭೆಯಲ್ಲಿ ತಪ್ಪು ತಿಳುವಳಿಕೆ ನೀಡಿದ ಅಧಿಕಾರಿ ಮೇಲೆ ಕ್ರಮ ಜರುಗಿಸಬೇಕು. | ಈ ಹಿಂದೆ ನಗರೋತ್ಥಾನ ಹಂತ-4ರ ಕ್ರಿಯಾಯೋಜನೆ ತಯಾರಿಸಲು ಸಾಮಾನ್ಯ ಸಭೆಯ ಸೂಚನಾ ಪತ್ರ ಸಂಖ್ಯೆ:ಪುಸಮು/ಸಭೆ/2022-23 ದಿ:07-05-2022ರ ಪ್ರಕಾರ ದಿ:13-05-2022 ರಂದು ಬೆಳಗೆ 11.00 ಗಂಟೆಗೆ ಸಾಮಾನ್ಯ ಸಭೆ ನಿಗಧಿಪಡಿಸಿದ್ದು ಇರುತ್ತದೆ. ಈ ನಡುವೆ ವಿಧಾನ ಪರಿಷತ್ ಚುನಾವಣೆ ನಿಮಿತ್ಯ ನೀತಿ ಸಂಹಿತೆ ಜಾರಿಗೆ ಬಂದ ಪ್ರಯುಕ್ತ ಸಾಮಾನ್ಯ ಸಭೆಯನ್ನು ಮುಂದೂಡಲಾಗಿತ್ತು ಎಂದು ಮುಖ್ಯಾಧಿಕಾರಿಗಳು ಮೌಖಿಕವಾಗಿ ತಿಳಿಸಿದ್ದು, ಸಭೆ ಮುಂದೂಡಿದ ಬಗ್ಗೆ ದಾಖಲಾತಿಗಳು ಹಾಜರಪಡಿಸಿರುವುದಿಲ್ಲ.<br>ಮುಂದುವರೆದು ಸಾಮಾನ್ಯ ಸಭೆಯ ಸೂಚನಾ ಪತ್ರ ಸಂಖ್ಯೆ:ಪುಸಮು/ಸಾ.ಸಭೆ/2022-23 ದಿ:20-06-2022ರ ಪ್ರಕಾರ ಈ ಹಿಂದೆ ನಿಗಧಿಪಡಿಸಿ ಸಾಮಾನ್ಯ ಸಭೆಯನ್ನು ದಿ:27-06-2022 ಬೆಳಗ್ಗೆ 11.00 ಗಂಟೆಗೆ ಸಾಮಾನ್ಯ ಸಭೆ ನಿಗಧಿಪಡಿಸಿರುತ್ತದೆ. ಮುಂದುವರೆದ ಸಾಮಾನ್ಯ ಸಭೆಯಾದ ಪ್ರಯುಕ್ತ ಈ ಹಿಂದಿನ ಸಾಮಾನ್ಯ ಸಭೆಯ ವಿಷಯಗಳನ್ನೇ ಯಥಾ ಪ್ರಕಾರ ತೆಗೆದುಕೊಂಡಿರುತ್ತಾರೆ. |

ಅನುಬಂಧ - 9 ಪುಟ ಸಂಖ್ಯೆ:[illegible] ರಿಂದ [illegible] ರವರಗೆ ಲಗತ್ತಿಸಲಾಗಿದೆ.

**ತನಿಖಾಧಿಕಾರಿಗಳು**

ಶ್ರೀ ಜಿ.ಕೆ ಕಲಬುರಗಿ ಪ್ರ.ದ.ಸ
ಮಹಾನಗರಪಾಲಿಕೆ, ವಿಜಯಪುರ

ಶ್ರೀ ಆರ್.ಪಿ.ಜಾಧವ ವಲಯ ಆಯುಕ್ತರು
ಮಹಾನಗರಪಾಲಿಕೆ, ವಿಜಯಪುರ

ಶ್ರೀ ಅನೀಲಕುಮಾರ ಮುದ್ದಾ ಸ.ಕಾ.ಅಭಿಯಂತರರು
ಜಿಲ್ಲಾ ನಗರಾಭಿವೃದ್ಧಿಕೋಶ ವಿಜಯಪುರ